

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 08 Issue : 03 Wednesday 03-09-2025 E-mail : maruti.b.hosamani76@gmail.com Page: 4 Price : Rs. 1/-


## ಒಂದುಶಿಶು ಅಭಿವೃದ್ಧಿ ಕೇಂದ್ರದಲ್ಲಿ ಕಾಮ್ ಚೋರ್, ಶಿಕ್ಷಕಿಯರ ಕರ್ಮಕಾಂಡ ಬಯಲು–ಸ್ಥಳೀಯರ ಆಕ್ರೋಶ ವ್ಯಕ್ತ




**ಸಿಹಿ ಕಹಿ ಸುದ್ದಿ,**

**ಹೂವಿನ ಹಿಪ್ಪರಗಿ :** ಬಸವನ ಬಾಗೇವಾಡಿ ತಾಲೂಕಿನ ಹೂವಿನ ಹಿಪ್ಪರಗಿ ಗ್ರಾಮದ ಅಂಗನವಾಡಿ ಕೇಂದ್ರ ಸಂಖ್ಯೆ 01 ಮತ್ತು 07 ಒಂದೇ ಸೂರಿನಡಿಯಲ್ಲಿ ಅಸಮರ್ಪಕವಾಗಿ ನಡೆಸುತ್ತಾ ಬಂದಿರುವ ಅಂಗನವಾಡಿ ಕಾರ್ಯಕರ್ತೆಯರು. ಇಂದು ನಮ್ಮ ಪತ್ರಿಕಾ ತಂಡವು ದಿನಾಂಕ 01/09/2025 ರಂದು ಮಧ್ಯಾಹ್ನ ಸಮಯ 3:00ಗೆ ಅಂಗನವಾಡಿ ಕೇಂದ್ರ ಸಂಖ್ಯೆ ಒಂದು ಮತ್ತು ಏಳರಲ್ಲಿ ಭೇಟಿ ನೀಡಿದಾಗ ಅಂಗನವಾಡಿ ಕೇಂದ್ರಗಳ ಬಾಗಿಲುಗಳನ್ನು ಹಾಕಿಕೊಂಡು ಮಧ್ಯಾಹ್ನ 12:00 ಗಂಟೆಗೆ ಮನೆಗೆ ಹೋಗಿದ್ದಾರೆಂದು ಗ್ರಾಮದ ಸ್ಥಳಿಯರು ತಿಳಿಸಿದರು. ಸರ್ಕಾರ ಶಿಶು ಅಭಿವೃದ್ಧಿ ಯೋಜನೆ ಅಡಿಯಲ್ಲಿ ಶಿಶುಗಳಿಗೆ ಪೌಷ್ಟಿಕ ಆಹಾರ ನೀಡುವ ಸಲುವಾಗಿ ಮತ್ತು ಆ ಮಕ್ಕಳಿಗೆ ಪೂರ್ವ ಪ್ರಾಥಮಿಕ ಹಂತದ ಶಿಕ್ಷಣವನ್ನು ನೀಡುವ ಸಲುವಾಗಿ ಸರ್ಕಾರ ಸಾಕಷ್ಟುಹಣವನ್ನುಖರ್ಚುಮಾಡುತ್ತದೆ.ಅಲ್ಲದೆ ಆ ಒಂದು ಅಂಗನವಾಡಿ ಕೇಂದ್ರದ ವ್ಯಾಪ್ತಿಯಲ್ಲಿ ಬರುವ ಗರ್ಭಿಣಿ ಮಹಿಳೆಯರಿಗೆ ಪೌಷ್ಟಿಕಾಂಶ ನೀಡುವ ಸಲುವಾಗಿ ಕಾಳು ಕಡಿ ತರಕಾರಿ ಮೊಟ್ಟೆ ಮುಂತಾದವುಗಳನ್ನುನೀಡಲು ಈ ಕೇಂದ್ರಗಳಿಗೆ ಆಹಾರ ಸರಬರಾಜು ಮಾಡುತ್ತಾ ಇಲ್ಲಿ ಕಾರ್ಯಕರ್ತರು ಹಾಗೂ ಸಹಾಯಕಿ ಅವರು ನೇಮಕ ಮಾಡಲಾಗಿರುತ್ತದೆ. ಸರ್ಕಾರದ ಕೆಲಸ ದೇವರ ಕೆಲಸ ಎನ್ನುವ ಮಾತಿದೆ. ಆದರೆ ಇಲ್ಲಿ ಮಾತ್ರ ಇಲ್ಲಿನ ಅಂಗನವಾಡಿ ಕಾರ್ಯಕರ್ತೆ ಸಹಾಯಕಿಯರು ಮಕ್ಕಳಿಗೆ ಸರಿಯಾಗಿ ಆಹಾರವನ್ನು ಕೂಡ ವಿತರಿಸದೆ ಹಾಗೂ ಗರ್ಭಿಣಿ ಮಹಿಳೆಯರಿಗೂ ಕೂಡ ಸರಿಯಾಗಿ ಬಂದಿರುವ ಸೌಲಭ್ಯಗಳನ್ನು ಪೂರೈಸದೆ ಬೆಳಗಿನ ಜಾವ ತಮ್ಮ ಮಸ್ಸೋ ಇಚ್ಛೆ ಬಂದು ಬಾಗಿಲು ತೆರೆದು ಇಲ್ಲಿನ ಅಂಗನವಾಡಿ ಸಹಾಯಕಿ ಅವರು ನಾಲ್ಕೈದು ಮಕ್ಕಳನ್ನು ಕರೆದುಕೊಂಡು ಬಂದು ಜೀವಸತ್ವವಿಲ್ಲದ ಆಹಾರವನ್ನುತಯಾರಿಸಿಅರ್ಧಂಬರ್ಧಬೆಂದ ಅಡಿಗೆಯನ್ನಮಕ್ಕಳಿಗೆ ತಿನ್ನಲು ಹೇಳಿ ಮಕ್ಕಳನ್ನು ಮನೆಗೆ ಕಳುಹಿಸಿ ಕೊಟ್ಟು ಬಿಡುತ್ತಾರೆ ಎಂದು ಸ್ಥಳೀಯರು ಗಂಭೀರ ಆರೋಪ ಮಾಡಿದರು. ಈ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಇವರ ವೇತನವನ್ನು ತಡೆ ಹಿಡಿದು. ಇವರನ್ನು ಅಮಾನತ್ತಿನಲ್ಲಿಟ್ಟು ಸೂಕ್ತ ತನಿಖೆಯನ್ನು ಮಾಡಿ ಇವರನ್ನು ಈ ಕರ್ತವ್ಯದಿಂದ ವಜಾ ಗೊಳಿಸ ಬೇಕೆಂದು ಸ್ಥಳೀಯ ಗ್ರಾಮಸ್ಥರು ಮಹಿಳೆಯರು ಅಕ್ರೋಶವನ್ನು ವ್ಯಕ್ತಪಡಿಸಿದರು ಎಂದು ವರದಿಯಾಗಿದೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ನಿಂಗಪ್ಪ.ಬಿ. ಗೊರಗುಂಡಗಿ.ಬಸವನ ಬಾಗೇವಾಡಿ**

## ಪ್ರವಾದಿ ಮೊಹಮ್ಮದ್–ಸಿರತ್ ಅಭಿಯಾನ–2025



**ಸಿಹಿ ಕಹಿ ಸುದ್ದಿ,**

**ತರೀಕೆರೆ :** ಶಾಂತಿ ನೆಮ್ಮದಿ ಸಾರುತ್ತ 6 ನೇ. ಶತಮಾನದಲ್ಲಿ ಸಂಪೂರ್ಣ ಮಾನವ ಕುಲಕ್ಕೆ ಕರುಣಾಮಯಿಯಾಗಿ ಆಗಮಿಸಿದ್ದ ಪ್ರವಾದಿ ಮಹಮ್ಮದ್ ಸ ರವರು ನ್ಯಾಯ, ಸಮಾನತೆ, ಬಡವರ,ದುರ್ಬಲರ,ಶೋಷಿತರ,ದಮನಿತರ, ಅನಾಥರ, ವಿಧವೆಯರ ಅಸಹಾಯಕರ ಪರವಾಗಿ ಧ್ವನಿ ಎತ್ತಿದರು ಎಂದು ಸಿರತ್ ಅಭಿಯಾನದ ಸಂಚಾಲಕರಾದ ಶೇಕ್ ಜಾವಿದ್ ರವರು ಹೇಳಿದರು. ಅವರು ಇಂದು ಪಟ್ಟಣದ ಹೋಟೆಲ್ ಅರಮನೆ ಆವರಣದಲ್ಲಿ ಕರೆದಿದ್ದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದರು. ಪ್ರತಿಯೊಬ್ಬ ಮನುಷ್ಯನಿಗೂ ನ್ಯಾಯ ಸಿಗಬೇಕು ಆರೋಗ್ಯ ಪೂರ್ಣ ಸಮಾಜವಾಗಬೇಕು, ಸಮಾಜದಲ್ಲಿ ಶಾಂತಿ ಸಮಾಧಾನ, ನೆಮ್ಮದಿ ನೆಲೆಯಾಗಲು ನ್ಯಾಯ ಪಾಲನೆ ಅಗತ್ಯ ಎಂದು ಪ್ರವಾದಿ ಮೊಹಮ್ಮದ್ ಸ ರವರು ಹೇಳಿದ್ದಾರೆ, ಶ್ರೀಮಂತರಿಗೆ ಒಂದು ನ್ಯಾಯ ಬಡವರಿಗೆ ಒಂದು ನ್ಯಾಯ ದುರ್ಬಲರಿಗೆ ಶೋಷಿತರಿಗೆ ಒಂದು ನ್ಯಾಯ ವಾಗಬಾರದು. ಪ್ರತಿಯೊಬ್ಬರಿಗೂಒಂದೇನ್ಯಾಯವಾಗಿರಬೇಕು ಎಂದು ಪ್ರವಾದಿ ಮುಹಮದ್ ಸ ಅವರು ಹೇಳಿದ್ದಾರೆ. ಅನಾಥ ರಕ್ಷಕ ಸ್ತ್ರೀ ವಿಮೋಚಕ ನ್ಯಾಯದ ಹರಿಕಾರ ಪ್ರವಾದಿ ಮಹಮ್ಮದ್ ಸ ಅವರ ವಿಚಾರಗಳನ್ನು ಆದರ್ಶಗಳನ್ನು ಅವರ ಸಂದೇಶಗಳನ್ನು ಜಗತ್ತಿನಲ್ಲಿ ವ್ಯಾಪಕ ಗೊಳಿಸುವುದು ಅತ್ಯವಶ್ಯಕವಾಗಿದೆ ಹಾಗೂ ಅನಿವಾರ್ಯವಾಗಿದೆ.ಆದ್ದರಿಂದರಾಜ್ಯಾದ್ಯಂತ ಸೆಪ್ಟೆಂಬರ್ ಮೂರರಿಂದ 14 ರ ವರೆಗೆ ಜಮಾಅತೆ ಇಸ್ಲಾಮಿ ಹಿಂದ್ ರಾಜ್ಯದಾದ್ಯಂತ ಸೀರತ್ ಅಭಿಯಾನವನ್ನು ಹಮ್ಮಿಕೊಂಡಿದೆ ಸಮಾಜ ಸೇವಾ ಕಾರ್ಯಗಳಾದ ವೃದ್ಧಾಶ್ರಮ ಅನಾಥಾಶ್ರಮಆಸ್ಪತ್ರೆಗಳಿಗೆಭೇಟಿನೀಡಿರುವುದು ರಕ್ತದಾನ ಮಾಡುವುದು ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ ಎಂದು ಹೇಳಿದರು. ಜಮಾಅತೆ ಇಸ್ಲಾಮಿ ಹಿಂದ್, ತರೀಕೆರೆ ಘಟಕದ ಮುಖಂಡರಾದ ಆದಿಲ್ ಪಾಷಾ ಅವರು ಮಾತನಾಡಿ ದಿನಾಂಕ 11.09.2025ರ ಗುರುವಾರ ಸಂಜೆ 7 ಗಂಟೆ-ಗೆ ತರೀಕೆರೆಯ ಹೋಟೆಲ್ ಅರಮನೆಯಲ್ಲಿ ಸೀರತ್ ಪ್ರವಚನ ಕಾರ್ಯಕ್ರಮ ಏರ್ಪಡಿಸಿದ್ದು ಪ್ರವಚನಕಾರರಾಗಿ ಜನಾಬ್ ಅಕ್ಬರ್ ಅಲಿ ಉಡುಪಿ ಮತ್ತು ಮುಖ್ಯ ಅತಿಥಿಗಳಾಗಿ ಶ್ರೀ ಗುರುಬಸವ ಮಹಾಸ್ವಾಮಿಗಳು ವಿರಕ್ತ ಮಠ ಪಾಂಡುಮಟ್ಟಿ ಚೆನ್ನಗಿರಿ ತಾಲೂಕು ರವರು ಆಗಮಿಸುತ್ತಿದ್ದಾರೆ ಮತ್ತು ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿದೆ ಇದೇ ಸಂದರ್ಭದಲ್ಲಿ ಈ ಅಭಿಯಾನದ ಪ್ರಯುಕ್ತ ಶಾಂತಿ ಪ್ರಕಾಶನ ಪ್ರಕಟಿಸಿರುವ ಪ್ರವಾದಿ ಅವರ ಬದುಕು ಮತ್ತು ಸಂದೇಶಗಳ ಬಗ್ಗೆ ಬೆಳಕು ಚೆಲ್ಲುವ ಎರಡು ಹೊಸ ಪುಸ್ತಕಗಳನ್ನು ಬಿಡುಗಡೆ ಗೊಳಿಸಲಾಗುವುದು ಎಂದು ಹೇಳಿದರು. ಮಿರಾಜ್ ಮಸೀದಿ ಅಧ್ಯಕ್ಷರಾದ ಶರ್ಮದ್ ಉಲ್ಲಾ ಖಾನ್ ಮಾತನಾಡಿ ಯುವ ಜನತೆಗಾಗಿ ರೀಲ್ಸ್ ಮೇಕಿಂಗ್ ಕಾಂಪಿಟೇಶನ್ ಆಯೋಜಿಸಲಾಗಿದೆ ಮತ್ತು ವೈಯುಕ್ತಿಕ ಭೇಟಿ, ಸಾಮೂಹಿಕ ಭೇಟಿ, ಕಾರ್ನರ್ ಮೀಟಿಂಗ್ ಗಳ ಮೂಲಕ ಪ್ರವಾದಿ ಸಂದೇಶಗಳನ್ನು ವ್ಯಾಪಕ ಗೊಳಿಸಲು ಪ್ರಯತ್ನಿಸಲಾಗುವುದು ಎಂದು ಹೇಳಿದರು. ಪತ್ರಿಕಾ ಗೋಷ್ಠಿಯಲ್ಲಿ ಜಮಾಅತೆ ಇಸ್ಲಾಮಿ ಹಿಂದ್ ತರೀಕೆರೆ ಘಟಕದ ಅಧ್ಯಕ್ಷರಾದ ಸೈಯದ್ ಇಸ್ಮಾಯಿಲ್, ಸ್ಟೂಡೆ-ಂಟ್ ಇಸ್ಲಾಮಿಕ್ ಆರ್ಗನೈಸನ್ ನ ತರೀಕೆರೆ ಘಟಕದ ಅಧ್ಯಕ್ಷರಾದ ಅಬ್ದುಲ್ ರಹಮಾನ್, ಹಾಗೂ ಜಮಾತೆ ಇಸ್ಲಾಮಿ ಹಿಂದ್ ತರೀಕೆರೆ ಘಟಕದ ಕಾರ್ಯಕರ್ತರು ಉಪಸ್ಥಿತರಿದ್ದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಎನ್. ವೆಂಕಟೇಶ್.ತರೀಕೆರೆ.ಚಿಕ್ಕಮಗಳೂರು**

## ಪತ್ನಿ ಕೊಂದು ಬಾವಿಗೆ ಎಸೆದ ಪತಿ: ರಕ್ತದ ಕಲೆಯಿಂದ ಕೃತ್ಯ ಬಯಲು



**ಸಿಂದಗಿ :** ತಾಲ್ಲೂಕಿನ ಗಣಿಹಾರ ಗ್ರಾಮದಲ್ಲಿ ಮಂಗಳವಾರ ವ್ಯಕ್ತಿಯೊಬ್ಬ ತನ್ನ ಪತ್ನಿಯನ್ನು ಬರ್ಬರವಾಗಿ ಕಡಿದು ಕೊಲೆ ಮಾಡಿದ್ದಾನೆ.

ನೀಲಮ್ಮ ಆನಗೊಂಡ(46) ಕೊಲೆಯಾದ ಮಹಿಳೆ ಎಂದು ಗುರುತಿಸಲಾಗಿದೆ. ಆಕೆಯ ಪತಿ ಪರಮಾನಂದ ಹರಿತವಾದ ಆಯುಧದಿಂದ ಕತ್ತರಿಸಿ, ಬಾವಿಗೆ ಎಸೆದಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಅಪ್ಪಅಮ್ಮ ಸಣ್ಣಪುಟ್ಟ ವಿಚಾರಕ್ಕೆ ಜಗಳವಾಡುತ್ತಿದ್ದರು. ನಿನ್ನೆ ದಿನ ನಿನ್ನನ್ನು ಮುಗಿಸೇ ತೀರುತ್ತೇನೆ ಎಂದು ಬೈದಾಡಿ ಮನೆಯಿಂದ ಅಪ್ಪ ಹೊರಗೆ ಹೋಗಿದ್ದನು' ಎಂದು ಮೃತಳ ಪುತ್ರ ಷಣ್ಮುಖ ಪೊಲೀಸರಿಗೆ ದೂರು ನೀಡಿದ್ದಾರೆ.

ನಿನ್ನೆ ರಾತ್ರಿ ಎಲ್ಲರೂ ಮಲಗಿದ್ದಾಗ ನೀಲಮ್ಮ ಜಮೀನಿನಲ್ಲಿನ ಮೆಕ್ಕೆಜೋಳಕ್ಕೆ ಹಂದಿಗಳ ಹಾವಳಿ ಇರುವುದರಿಂದ ಪಟಾಕಿ ಸಿಡಿಸಲು ಹೋದ ಸಂದರ್ಭದಲ್ಲಿ ಅವಳ ಬೆನ್ನತ್ತಿ ಹೋದ ಗಂಡ ಪರಮಾನಂದಅವಳನ್ನುಕತ್ತರಿಸಿಬಾವಿಗೆಎಸೆದಿದ್ದಾನೆ. ಮಂಗಳವಾರ ಬೆಳಿಗ್ಗೆ ಮಗ ತಾಯಿಯನ್ನುಹುಡುಕುತ್ತ ಹೋದಾಗ ಪಕ್ಕದ ಬಾವಿಯ ಬಳಿ ರಕ್ತದ ಕಲೆಗಳನ್ನು ಕಂಡು ಬಾವಿಯಲ್ಲಿ ಹುಡುಕಿದಾಗ ದೇಹದ ಅರ್ಧ ಭಾಗ ಸಿಕ್ಕಿದೆ. ದೇಹದ ಇನ್ನರ್ಧ ಭಾಗದ ಹುಡುಕಾಟ ನಡೆದಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

## ಪಟ್ಟಣದಲ್ಲಿ ಸಂಭ್ರಮದ ಗಣೇಶ ವಿಸರ್ಜನೆಯಲ್ಲಿ ಮಿಂದೆದ್ದ ಜನ

**ಸಿಹಿ ಕಹಿ ಸುದ್ದಿ,**

**ಆಲಮೇಲ:** ಪಟ್ಟಣದಲ್ಲಿ ರವಿವಾರ ರಾತ್ರಿ ಗಣೇಶ ವಿಸರ್ಜನೆಯು ಅದ್ದೂರಿಯಾಗಿ ನಡೆಯಿತು. ಕಳೆದ ನಾಲ್ಕು ದಶಕಗಳಿಂದ ಭಾವೈಕ್ಯತೆಯ ನೆಲೆಯಲ್ಲಿ ಇಲ್ಲಿಯ ಗಣೇಶ ಉತ್ಸವಕ್ಕೆ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದೆ.

ಕಾರ್ಯಕ್ರಮದ ಉದ್ಘಾಟನೆಗೆ ಒಂದು ವೇದಿಕೆಯನ್ನು ಪಟ್ಟಣ ಪಂಚಾಯತ ಹತ್ತಿರ ಮತ್ತು ಇನ್ನೊಂದು ವೇದಿಕೆಯನ್ನು ಅಂಬಿಗರ ಚೌಡಯ್ಯ ಸರ್ಕಲ್ ನಲ್ಲಿ ಎರಡು ಕಡೆ ಪ್ರಧಾನ ವೇದಿಕೆಗಳನ್ನು ನಿರ್ಮಿಸಲಾಗಿತ್ತು. ಪಟ್ಟಣದಲ್ಲಿ ಹದಿನೈದು ಚೌಕಿನಲ್ಲಿ ಪ್ರತಿಷ್ಠಾಪಿಸಲಾಗಿದ್ದ ಗಣೇಶ ಮೂರ್ತಿಗಳು ಏಕಕಾಲಕ್ಕೆ ವಿಸರ್ಜನೆಮೆರವಣಿಗೆಯಲ್ಲಿಸಾಗಿ ಬಂದವು. ಒಂದರ ಹಿಂದೆ ಒಂದು ಸಾಲು ಸಾಲು ಸ್ತಬ್ಧ ಚಿತ್ರಗಳು ಮೆರವಣಿಗೆಯಲ್ಲಿ ಸಾಗುತ್ತಿದ್ದರೆ ರಸ್ತೆಯ ಎರಡೂ ಕಡೆಗಳಲ್ಲಿ ಜನ ಜಾತ್ರೆತುಂಬಿಕೊಂಡಿತುಪೌರಾಣಿಕ ದೃಶ್ಯಗಳು ಮಹಾ ಭಾರತ ಮತ್ತು ರಾಮಾಯಣಕ್ಕೆ ಸಂಬಂಧಿಸಿದ



ರೂಪಕಗಳು,ಪ್ರಸ್ತುತ ಘಟನೆಗಳಿಗೆ ಸಂಬಂಧಿಸಿದಂತೆ ಚಿತ್ರಗಳು ನಿರ್ಮಾಣ ಮಾಡಲಾಗಿತ್ತು.

ರೇವಣಸಿದ್ದೇಶ್ವರ ಚೌಕದಿಂದ ಆರ್.ಸಿ.ಬಿ ತಂಡ ಕಪ್ ಕ್ರೀಡಾಪಟು ವಿರಾಟ್ ಕೊಹ್ಲಿ ಮತ್ತು ರಜತ್ ಪಾಟೀದಾರ ಅವರ ಸ್ತಬ್ಧ ಚಿತ್ರ ಬಹು ಆಕರ್ಷಣೀಯವಾಗಿತ್ತು, ಶ್ರೀ ಕಾಮನ ಕಟ್ಟೆ ಚೌಕನಿಂದ ಸೋಲಾಪೂರ ಸಿದ್ದರಾಮೇಶ್ವರ, ವೀರಭದ್ರೇಶ್ವರ ಚೌಕನಿಂದ ಗುಡ್ಡಗಾಡಿನಿಂದ ಅವತರಿಸಿದ ಕಾಮಕ್ಕ ದೇವಿ, ಶ್ರೀ ಸಾವಳಗಿ ಶಿವಲಿಂಗೇಶ್ವರ ಚೌಕನಿಂದ ಗಾಣದೇವತೆ, ಶ್ರೀ ಗಣೇಶ ನಗರ ಚೌಕನಿಂದ ಹಣಮಂತ ಲಿಂಗ ಪೂಜೆಮಾಡುವುದು.ಬಸವನಗರ ದಿಂದ ಕೃಷ್ಣ ವಾಸುದೇವ, ಭವಾನಿ ಕಟ್ಟೆಯಿಂದ ಉಗ್ರ ನರಸಿಂಹ ಅವತಾರ, ಹನುಮಂತ ಚೌಕ ಮತ್ತು ಗಾಂಧಿ ಚೌಕ ನವರು ದೇವಿ ಅವತಾರ, ಲಕ್ಷ್ಮೀ ಚೌಕಿನಿಂದ ನವದುರ್ಗೆಯ ಒಂದನೇ ಅವತಾರ (ಶೈಲಪುತ್ರಿ) ಅವತಾರ ಸೇರಿದಂತೆ ವಿವಿಧ ಸ್ತಬ್ಧ ಚಿತ್ರಗಳು ಜನರನ್ನು ಆಕರ್ಷಿಸಿದವು.

ಕಿವಿ ಗಡಚಿಕ್ಕುವ ಧ್ವನಿ ವರ್ಧಕ, ಎಲ್ಲೆ ಮೀರಿದ ಜನರ ಉತ್ಸಾಹ, ಪಡ್ಡೆ ಹುಡುಗರ ಕೇಕೆ ಕುಣಿತ, ವಿವಿಧ ಶಾಲಾ ಮಕ್ಕಳಿಂದ ಮನ ಮೋಹಕ ಕಲಾ ವೈಭವ ದರ್ಶನ ಜಾಂಜ್ ಪಥಕ್, ಹಲಗೆ ಮೇಳ, ಕೊಂಬು ವಾದನ, ಕೋಲಾಟಮೊದಲಾದಜಾನಪದ ತಂಡಗಳು ಮೆರವಣಿಗೆಗೆ ಸಾಥ್ ನೀಡಿದವು.

**ಹರಿದು ಬಂದ ಜನ ಸಾಗರ:** ಈ ಸಂಭ್ರಮ ಕಣ್ತುಂಬಿ ಕೊಳ್ಳಲು ಪಟ್ಟಣದ ಸುತ್ತ ಮುತ್ತಲಿನ ಹಳ್ಳಿಗಳ ಸಾವಿರಾರು ಸಂಖ್ಯೆಯಲ್ಲಿ ಜನರು ಸೇರಿದ್ದರು. ಸಿಂದಗಿ, ಇಂಡಿ, ಅಫಜಲಪೂರ, ವಿಜಯಪುರ, ಕಲಬುರ್ಗಿ, ಯಾದಗಿರ ಅಕ್ಕಲಕೋಟ, ದುದನಿ ನೆರೆ-ಯ ಮಹಾರಾಷ್ಟ್ರ ಆಂಧ್ರ ದಿಂದಲೂ ಜನರು ಆಗಮಿಸಿದ್ದ ರಿಂದ ಪಟ್ಟಣದಲ್ಲಿ ಜನ ಜಾತ್ರೆ ಸೇರಿದಂತಾಗಿತ್ತು.

**ಭಾವೈಕ್ಯತೆ ಸಂದೇಶ:** ಪಟ್ಟಣದಲ್ಲಿ ಕಳೆದ ಹದಿನೈದು ವರ್ಷಗಳಿಂದ ಮುಸ್ಲಿಂ ಮುಖಂಡ ಮೈಬೂಬ ಮಸಳಿಸಾರಥ್ಯದಲ್ಲಿಗಣೇಶೋತ್ಸವ ಭಾವೈಕ್ಯತೆಯೊಂದಿಗೆ ಆಚರಿಸಲಾಗುತ್ತದೆ ಗಜಾನನ ಮಹಾ ಮಂಡಳಿಗೆ ಇವರು ಪ್ರತಿ ವರ್ಷ ಅವಿರೋಧವಾಗಿ ಆಯ್ಕೆ ಯಾಗುತ್ತಿರುವದು ವಿಶೇಷ.

**ದಾಸೋಹ ವ್ಯವಸ್ಥೆ:** ಕಾಳೇಶ ಪತ್ತಾರ, ಅಪ್ಪುಗೌಡ ಪಾಟೀಲ, ಭೀಮು ಬಂಡಗಾರ ಸೇರಿದಂತೆ ಹಲವರು ಪಟ್ಟಣದ ಎರಡು ಕಡೆಗಳಲ್ಲಿ ಉತ್ಸವ ನೋಡಲು ಆಗಮಿಸಿದ ಸಾರ್ವಜನಿಕರಿಗೆ ದಾಸೋಹ ವ್ಯವಸ್ಥೆಯೂ ಸ್ಥಳೀಯರು ಮಾಡಿದ್ದರು.

**ಪೊಲೀಸ್ ಸೂಕ್ತ ಬಂದೋಬಸ್ತ್:** ಮುಂಜಾಗ್ರತ ಕ್ರಮವಾಗಿ ಬಿಗಿ ಪೊಲೀಸ್ ಬಂದೊಬಸ್ತ್ ಮಾಡಲಾಗಿತ್ತು ಜಿಲ್ಲಾ ಪೊಲೀಸ ವರಿಷ್ಠಾಧಿಕಾರಿಗಳು ಇಂಡಿ ಡಿ.ವೈ.ಎ.ಸ್ಪಿ ಸಿಂದಗಿ ಸಿ.ಪಿ.ಐ ಆಲಮೇಲ ಪಿ.ಎಸ್.ಐ ಮತ್ತು ಡಿ.ಆರ್.ಎ ಪೊಲೀಸರಿಂದ ಸೂಕ್ತ ಬಂದೊಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ರೇವಣಸಿದ್ದಯ್ಯ. ಜಿ.ಹಿರೇಮಠ.ಆಲಮೇಲ**

## ಧರ್ಮಸ್ಥಳ ಪ್ರಕರಣ ಎನ್‌ಐಎ ತನಿಖೆ ನಡೆಸಿದರೇ ತಪ್ಪೇನಿದೆ:ಸಚಿವ ಸತೀಶ ಜಾರಕಿಹೊಳಿ



**ಜಮಖಂಡಿ :** ಧರ್ಮಸ್ಥಳ ಪ್ರಕರಣದಲ್ಲಿ ಎಸ್‌ಐಟಿ ತನಿಖೆ ಪೂರ್ಣವಾಗಿದೆ, ಎಸ್‌ಐಟಿ ತನಿಖೆಯ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಇನ್ನೂ ಸಲ್ಲಿಸಿಲ್ಲ. ಅಂತಿಮ ವರದಿಯ ಸಲ್ಲಿಕೆಯಾದ ನಂತರ ವರದಿಯಲ್ಲಿ ಏನಿದೆ ಎಂದು ತಿಳಿಯುತ್ತದೆ ನಂತರ ರಾಷ್ಟ್ರೀಯ ಏಜೆನ್ಸಿಗಳ ತನಿಖೆ ವಿಚಾರ ಬರುತ್ತದೆ. ಎನ್‌ಐಎ ತನಿಖೆ ನಡೆಸಿದರೇ ತಪ್ಪೇನಿದೆ ಎಂದು ತಮ್ಮ ಹೇಳಿಕೆಯನ್ನು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಸಮರ್ಥಿಸಿಕೊಂಡರು. ಸೋಮವಾರ ಜೈನ ಸಮಾಜದ ಕಾರ್ಯಕ್ರಮದಲ್ಲಿ ಭಾಗವಹಿಸಲು ನಗರಕ್ಕೆ ಆಗಮಿಸಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. ಧರ್ಮಸ್ಥಳ ಪ್ರಕರಣದಲ್ಲಿ ಎಸ್‌ಐಟಿ ಸಂಪೂರ್ಣ ವಾಗಿ ತನಿಖೆ ನಡೆಸಿದೆ ತನಿಖೆಯ ವರದಿ ಬರಲಿ ನೋಡೋಣ ಎಂದುಹೇಳಿದರು. ಮಾಜಿ ಸಚಿವ ರಾಜಣ್ಣ ಅವರಿಗೆ ಅನ್ಯಾಯ ವಾಗಿದೆ. ಉಪಮುಖ್ಯಮಂತ್ರಿಗಳು ಸದನದಲ್ಲಿ ಆರೆಸ್‌ಎಸ್‌ನ ಹಾಡು ಹಾಡಿದ್ದಾರೆ ಎಂದು ಕೇಳಿದ ಪ್ರಶ್ನೆಗೆ ಅವರೇ ಅದಕ್ಕೆ ಉತ್ತರಿಸಬೇಕು, ಇಂಥಹ ವಿಚಾರದಲ್ಲಿ ಮುಖ್ಯಮಂತ್ರಿಗಳು ಹಾಗೂ ಹೈಕಮಾಡ್ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಹೇಳಿದರು. ಡಿಕೆಸಿ ವಿಚಾರದಲ್ಲಿ ಹೈಕಮಾಂಡ ಮೃದು ಧೋರಣೆ ತಾಳಿದೆಯಾ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು ರಾಜ್ಯದಲ್ಲಿ ಏನು ನಡೆಯುತ್ತಿದೆ ಎಂಬ ಕೆಲ ವಿಚಾರಗಳು ಹೈಕಮಾಂಡ್ ಗಮನಕ್ಕೆ ಬಂದಿರುವದಿಲ್ಲ. ಕೆಲ ವಿಚಾರಗಳು ಮಾತ್ರ ರಾಹುಲ್ ಗಾಂಧಿ ಅವರಿಗೆ ಮುಟ್ಟುತ್ತವೆ, ಕೆಲವು ಮುಟ್ಟುವದಿಲ್ಲ ಆದ್ದರಿಂದ ಎಲ್ಲ ವಿಷಯಗಳನ್ನು ಅವರಿಗೆ ಮುಟ್ಟಿಸುವ ಕೆಲಸ ಮಾಡಬೇಕಿದೆ ಎಂದು ಹೇಳಿದರು. ಕೆ,ರಾಜಣ್ಣ ವಿಚಾರದಲ್ಲಿ ಅನ್ಯಾಯ ವಾಗಿದ್ದನ್ನು ಹೈಕಮಾಂಡ್‌ಗೆ ವಿವರಿಸುವ ಕೆಲಸವಾಗಬೇಕು, ಮುಖ್ಯಮಂತ್ರಿಗಳು ಹಾಗೂ ಸ್ವತಹ ರಾಜಣ್ಣ ಅವರು ಹೈಕ ಮಾಂಡ ಗಮನಕ್ಕೆ ತರಬೇಕು ಅವರ ವಿಚಾರವನ್ನು ತಿರುಚಿ ಹೇಳಲಾಗಿದ್ದು ಹೈಕಮಾಂಡ್‌ಗೆ ಕನ್ವಿನ್ಸ್ ಮಾಡಬೇಕು ಎಂದು ಅಭಿಪ್ರಾಯ ಪಟ್ಟರು.

## ಯೂರಿಯಾ ಅನಧಿಕೃತವಾಗಿ ಸಂಗ್ರಹಿಸಿದ್ದರೆ ಪರವಾನಗಿ ರದ್ದು: ಎ.ಸಿ ಗುರುನಾಥ ದಡ್ಡೆ

**ಕೊಲ್ಹಾರ :** ಗೊಬ್ಬರ ಅಂಗಡಿ ಮಾಲೀಕರು ರೈತರಿಗೆ ಸಕಾಲದಲ್ಲಿ ಯೂರಿಯಾ ನೀಡಬೇಕು.

ಅನಧಿಕೃತವಾಗಿ ಗೊಬ್ಬರ ಸಂಗ್ರಹಿಸಿದ್ದರೆ ಅಂತಹ ಅಂಗಡಿಯ ಪರವಾನಗಿ ರದ್ದು ಮಾಡಲಾಗುವುದು ಎಂದು ವಿಜಯಪುರ ಎ.ಸಿ ಗುರುನಾಥ ದಡ್ಡೆ ತಿಳಿಸಿದರು.

ಪಟ್ಟಣದ ತಹಶೀಲ್ದಾರ್ ಕಚೇರಿ ಮುಂಭಾಗದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಸಿರು ಸೇನೆ ಹಾಗೂ ಕರವೇ ಕಾರ್ಯಕರ್ತರು ರೈತರಿಗೆ ಯೂರಿಯಾ ಗೊಬ್ಬರ ಮತ್ತು ಬೆಳೆ ಪರಿಹಾರ ಬೇಡಿಕೆಗಳ ಈಡೇರಿಕೆಗೆಗಾಗಿ ಸೋಮವಾರ ನಡೆದ ಪ್ರತಿಭಟನೆ ವೇಳೆ ಅವರು ಮಾತನಾಡಿದರು. ರೈತರ ಬೆಳೆಗಳಿಗೆ ಬೆಳೆಹಾನಿ ಕುರಿತು ಶೀಘ್ರದಲ್ಲೇ ವರದಿ ಪಡೆದು ಪರಿಹಾರ ನೀಡಲಾಗುವುದು.

ಬಳೂತಿ ಗ್ರಾಮದಲ್ಲಿ ಆಶ್ರಯ




ಯೋಜನೆಯಲ್ಲಿಮನೆನಿರ್ಮಾಣವಾದರೂ ಹಕ್ಕುಪತ್ರ ವಿತರಣೆ ಹಾಗೂ ಹಳ್ಳದ ಗೆಣ್ಣೂರ ಗ್ರಾಮದಲ್ಲಿನ ಸಾರ್ವಜನಿಕ ಸ್ಥಳಗಳ ಸಮಸ್ಯೆ ಬಗ್ಗೆ ಮಾಹಿತಿ ಪಡೆದು ಬೇಡಿಕೆಗಳನ್ನು ಈಡೇರಿಸಲಾಗುವುದು ಎಂದು ಹೇಳಿದರು.

ಹೋರಾಟ ಸ್ಥಳಕ್ಕೆ ಆಗಮಿಸಿದ ಕೊಲ್ಹಾರ ದಿಗಂಬರೇಶ್ವರ ಮಠದ ಕಲ್ಲಿನಾಥ ದೇವರು, 'ರೈತರಿಗೆ ಸರಿಯಾದ ಸಮಯಕ್ಕೆ ಗೊಬ್ಬರ ಹಾಗೂ ಬೆಳೆದ ಬೆಳೆಗೆ ಉತ್ತಮ ಬೆಲೆ ಸಿಕ್ಕರೆ ಸರ್ಕಾರಕ್ಕೆ ರೈತ ಸಾಲ ಕೊಡಬಲ್ಲ. ಆದರೆ ಇಂದು ರೈತ ತನ್ನ ಗೊಬ್ಬರ ಪಡೆಯಲು ಹೋರಾಟ ಮಾಡಿ ಪಡೆಯುವ ದುಸ್ಥಿತಿ ಬಂದಿದೆ' ಎಂದು ಹೇಳಿದರು.

ಪಟ್ಟಣದ ಮುಖಂಡ ಟಿ.ಟಿ ಹಗೇದಾಳ, ಜಿಲ್ಲಾ ರೈತ ಸಂಘದ ಅಧ್ಯಕ್ಷ ಸಂಗಮೇಶ ಸಗರ,ಕರವೇ ತಾಲ್ಲೂಕು ಅಧ್ಯಕ್ಷ ಮಹಾಂತೇಶ ಗಿಡ್ಡಪ್ಪಗೋಳ, ರವಿ ಗೊಳಸಂಗಿ, ಪ್ರದೀಪಗೌಡ ಪಾಟೀಲ, ತಹಶೀಲ್ದಾರ ಎಸ್.ಎಂ.ಮ್ಯಾಗೇರಿ, ಪಿಎಸ್‌ಐ ಎಂ.ಬಿ.ಬಿರಾದಾರ, ಉಪ ಕೃಷಿ ನಿರ್ದೇಶಕ ಶರಣಗೌಡ ಮಾತನಾಡಿದರು.

ಶಶಿಕಾಂತ ಬಿರಾದಾರ, ಮುದಕಪ್ಪ ಚಲವಾದಿ, ಶ್ರೀಶೈಲ ಬೆಣ್ಣೂರ, ಸುರೇಶ ಗಿಡ್ಡಪ್ಪಗೋಳ,ಗೋಪಾಲ ಕಾಖಂಡಕಿ, ಕಲ್ಲಪ್ಪ ಗಿಡ್ಡಪ್ಪಗೋಳ, ಬಸವರಾಜ ನ್ಯಾಮಗೊಂಡ,ಗುಳಪ್ಪ ಗುಗ್ಗರಿ,ಸತ್ಯಪ್ಪ ಕುಳ್ಳೊಳ್ಳಿ ನೂರಾರು ರೈತರು ಹಾಗೂ ಕರವೇ ಕಾರ್ಯಕರ್ತರು ಪಾಲ್ಗೊಂಡಿದ್ದರು.

# ತುಂಗಭದ್ರಾ ಆರತಿ: ಭದ್ರಾ ತಟದಲ್ಲಿ ಅರಳಿದ ಚೆಂಬೆಳಕು



**ಹುಲಿಗಿ :** ಕಣ್ಣೆದುರು ವಿಶಾಲವಾಗಿ ಹರಿಯುತ್ತಿದ್ದ ತುಂಗಭದ್ರಾ ನದಿಯ ವಿಹಂಗಮ ನೋಟ, ತರಹೇವಾರಿ ಹೂಗಳಲ್ಲಿ ಅಲಂಕೃತವಾಗಿ ಕುಳಿತಿದ್ದ ಹುಲಿಗೆಮ್ಮ ದೇವಿಯ ಮೂರ್ತಿ, ನದಿಯ ಮಧ್ಯಭಾಗದಿಂದ ಪುಟಿದೇಳುತ್ತಿದ್ದ ಬಾಣಬಿರುಸುಗಳ ಚಿತ್ತಾರ ಹಾಗೂ ನದಿಯ ನೀರಿನ ಮೇಲೆ ಚೆಲ್ಲಿದ ಆರತಿಯ ಚೆಂಬೆಳಕು. ಉತ್ತರ ಕರ್ನಾಟಕದ ಶಕ್ತಿದೇವತೆ ಎಂದು ಹೆಸರಾದ ಹುಲಿಗಿಯ ಹುಲಿಗೆಮ್ಮ ದೇವಿ ದೇವಸ್ಥಾನದ ಸಮೀಪದಲ್ಲಿ ಹರಿಯುವ ತುಂಗಭದ್ರಾ ನದಿ ಬಳಿ ಮಂಗಳವಾರ ಕಂಡುಬಂದ ದೃಶ್ಯಾವಳಿಗಳು ಇವು. ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಯಲ್ಲಿರುವ ಇಲ್ಲಿನ ಹುಲಿಗೆಮ್ಮ ದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಮೊದಲ ಬಾರಿಗೆ ನಡೆದ ತುಂಗಭದ್ರಾ ಆರತಿ ಜನರ ಮನಸೂರೆಗೊಂಡಿತು.

ಝುಳುಝುಳು ಎಂದು ಹರಿಯುತ್ತಿದ್ದನೀರಿನಶಬ್ದ,ಅಲೆಗಳ ಸೊಬಗು, ಸಮೀಪದಲ್ಲಿರುವ ಹಳಿಯ ಮೇಲೆ ರೈಲು ಸಾಗುತ್ತಿರುವ ಚಿತ್ರಣದ ಜೊತೆಗೆ ಇಲ್ಲಿನ ಭಕ್ತರು ತುಂಗಭದ್ರಾ ಆರತಿಯ ವೈಭವವನ್ನು ಕಣ್ತುಂಬಿಕೊಂಡರು. ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ, ಸಂಸದ ರಾಜಶೇಖರ ಹಿಟ್ನಾಳ, ಶಾಸಕ ರಾಘವೇಂದ್ರ ಹಿಟ್ನಾಳ, ವಿಧಾನಪರಿಷತ್ ಸದಸ್ಯೆ ಹೇಮಲತಾ ನಾಯಕ, ಮಾಜಿ ಸಂಸದ ಸಂಗಣ್ಣ ಕರಡಿ, ಮುನಿರಾಬಾದ್ ಕಾಡಾ ಅಧ್ಯಕ್ಷ ಹಸನಸಾಬ್ ದೋಟಿಹಾಳ್, ಕಾಂಗ್ರೆಸ್ ಜಿಲ್ಲಾಧ್ಯಕ್ಷಅಮರೇಗೌಡ ಬಯ್ಯಾಪುರ, ಮಾಜಿ ಶಾಸಕ ಕೆ. ಬಸವರಾಜ ಹಿಟ್ನಾಳ ಸೇರಿದಂತೆ ಅನೇಕರು ಪೂಜೆ ಸಲ್ಲಿಸುವ ಮೂಲಕ ಆರತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಕಾಶಿಯಲ್ಲಿ ಗಂಗಾ ಆರತಿ ನಡೆಸಿಕೊಡುವ 15 ಜನ ಅರ್ಚಕರು ಇಲ್ಲಿ ತುಂಗಭದ್ರಾ ಆರತಿ ನಡೆಸಿಕೊಟ್ಟಿದ್ದು ವಿಶೇಷ. ದೇವಸ್ಥಾನದ ವತಿಯಿಂದ ಸಾರ್ವಜನಿಕರಿಗೆ ಎರಡು ಸಾವಿರ ಆರತಿಗಳನ್ನು ಉಚಿತವಾಗಿ ನೀಡಲಾಯಿತು. ಕಾರ್ಯಕ್ರಮಕ್ಕೂ ಮೊದಲು ಸಾಕಷ್ಟು ಮಳೆ ಸುರಿದಿದ್ದರಿಂದ ಜನ ಪರದಾಡುವಂತಾಯಿತು.

ಸಂಜೆಯ ವೇದಿಕೆ ಕಾರ್ಯಕ್ರಮಕ್ಕೂ ಮೊದಲು ದೇವಸ್ಥಾನದಲ್ಲಿ ಚಂಡಿಕಾ ಹೋಮ, ಅನ್ನ ಸಂತರ್ಪಣೆ, ಮಹಿಳೆಯರಿಂದ ಕುಂಭ ಮೆರವಣಿಗೆ, ನದಿತೀರದಲ್ಲಿ ದೇವಿಯ ಮೂರ್ತಿಯ ಪ್ರತಿಷ್ಠಾಪನೆ ಮತ್ತು ವಿಶೇಷ ಪೂಜೆ ಜರುಗಿತು.

ಮಹಿಳೆಯರಿಗೆ ಉಡಿ ತುಂಬುವುದು, ಹೊಸಪೇಟೆಯ ಅಂಜಲಿ ಕಲಾತಂಡದವರಿಂದ ಭರತನಾಟ್ಯ ಜರುಗಿದವು.

ಹುಲಿಗಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ನೀಲಮ್ಮ ಗವಿಸಿದ್ದಪ್ಪ ಗುಂಗಾಡಿ,

ಜಿಲ್ಲಾ ಪಂಚಾಯಿತಿ ಸಿಇಒ ವರ್ಣಿತ್ ನೇಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಎಲ್. ಅರಸಿದ್ದಿ, ಹೆಚ್ಚುವರಿ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶಮಾಲಗಿತ್ತಿ,ತಹಶೀಲ್ದಾರ್ ವಿಠ್ಠಲ ಚಾಗುಲಾ ಹಾಗೂ ಪ್ರಾಧಿಕಾರದ ಕಾರ್ಯದರ್ಶಿ ಎಚ್. ಪ್ರಕಾಶರಾವ್ ಪಾಲ್ಗೊಂಡಿದ್ದರು.ಮೊದಲ ಬಾರಿಗೆ ನಡೆದ ತುಂಗಭದ್ರಾ ಆರತಿ ಕಾರ್ಯಕ್ರಮಕ್ಕೆ ಅದ್ದೂರಿ ಸ್ಪಂದನೆ ವ್ಯಕ್ತವಾಗಿದ್ದು ಮಳೆಯೂ ಬಿಡುವು ನೀಡಿತು. ಪ್ರತಿವರ್ಷವೂ ಆಚರಿಸಲಾಗುವುದು

# ಗೋದಾಮು ವ್ಯವಸ್ಥಾಪಕ ಅಮಾನತು



**ಗಂಗಾವತಿ :** ನಗರದ ಕನಕಗಿರಿ ರಸ್ತೆಯಲ್ಲಿರುವ ಸರ್ಕಾರಿ ಗೋದಾಮಿನಲ್ಲಿಟ್ಟಿದ್ದ ಪಡಿತರ ಅಕ್ಕಿಯನ್ನು ಖಾಸಗಿ ಸಂಸ್ಥೆಯ ಚೀಲಗಳಿಗೆ ಹೆಚ್ಚುವರಿಯಾಗಿ ತುಂಬಿ ಸಾಗಣೆ ಮಾಡಲು ಯತ್ನಿಸುತ್ತಿದ್ದ ಆರೋಪದ ಮೇಲೆ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಇದರ ಬೆನ್ನಲ್ಲೇ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ ಕಿರಿಯ ಸಹಾಯಕ ಹಾಗೂ ಗೋದಾಮು ವ್ಯವಸ್ಥಾಪಕ ಸೋಮಶೇಖರ ಅವರನ್ನು ಸೇವೆಯಿಂದ ಅಮಾನತು ಮಾಡಿ ಮಂಗಳವಾರ ಸರ್ಕಾರ ಆದೇಶ ಹೊರಡಿಸಿದೆ.

ನಗರದ ರಾಯಚೂರು ರಸ್ತೆಯ ವಿದ್ಯಾನಗರದ ಗೌರಿಶಂಕರ ರೈಸ್‌ಮಿಲ್‌ನಲ್ಲಿ ಅಕ್ರಮವಾಗಿ ಸಂಗ್ರಹಿಸಿದ್ದ 168 ಕ್ವಿಂಟಲ್ ಅಕ್ಕಿಯನ್ನು 2022ರಲ್ಲಿ ಅಧಿಕಾರಿಗಳು ದಾಳಿ ಮಾಡಿ ವಶಕ್ಕೆ ಪಡೆದು ಸರ್ಕಾರಿ ಗೋದಾಮಿನಲ್ಲಿಟ್ಟಿದ್ದರು.

ಸಂಬಂಧಿಸಿದ ಆರೋಪಿಗಳ ವಿರುದ್ಧ ಪ್ರಕರಣವನ್ನೂ ದಾಖಲಿಸಿದ್ದರು.

ಆರೋಪಿಗಳು ಕೋರ್ಟ್ ಮೊರೆ ಹೋಗಿ, 'ಅಧಿಕಾರಿಗಳು ಸೂಕ್ತ ದಾಖಲೆ ಸಂಗ್ರಹಿಸದೆ, ಅಕ್ಕಿಯನ್ನು ವಶಕ್ಕೆ ಪಡೆದಿದ್ದಾರೆ' ಎಂದು ವಾದ ಮಂಡಿಸಿದ್ದರಿಂದ ಇದೇ ವರ್ಷ ಜಿಲ್ಲಾಧಿಕಾರಿ ಆರೋಪಿಗಳಿಗೆ ಅಕ್ಕಿ ವಾಪಸ್ ನೀಡುವಂತೆ ಆದೇಶ ಹೊರಡಿಸಿದ್ದರು. ಜಪ್ತಿ ಮಾಡಿದ್ದ 168 ಕ್ವಿಂಟಲ್ ಅಕ್ಕಿಯನ್ನು ರೈಸ್‌ಮಿಲ್‌ನವರು ವಾಪಸ್ ಪಡೆದುಕೊಳ್ಳುವಾಗ ಗೋದಾಮು ವ್ಯವಸ್ಥಾಪಕ ಹಾಗೂ ಇತರರು 275ಕ್ಕೂ ಹೆಚ್ಚು ಕ್ವಿಂಟಲ್‌ನಷ್ಟು ಅಕ್ಕಿ ಸಾಗಾಣಿಕೆಗೆ ಸಹಕರಿಸಿದ್ದಾರೆ ಎನ್ನುವ ಆರೋಪ ಕೇಳಿಬಂದಿದೆ. ಮಾಹಿತಿ ತಿಳಿದ ಸಂಘಟನೆಗಳ ಮುಖಂಡರು ಹಾಗೂ

ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ವೆಂಕಟೇಶ್ ಬಾಬು ಆಹಾರ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿ ಪರಿಶೀಲಿಸಿದಾಗ ಪ್ರಕರಣ ಬಯಲಿಗೆ ಬಂದಿದೆ. ಇವೆಲ್ಲವೂ 9.10 ಲಕ್ಷ ಮೌಲ್ಯದ ಪಡಿತರ ಅಕ್ಕಿ ಎನ್ನುವ ಮಾಹಿತಿ ಗೊತ್ತಾಗಿದೆ.

ಈ ಕುರಿತು ಇಲ್ಲಿನ ತಹಶೀಲ್ದಾರ್ ಕಚೇರಿಯ ಆಹಾರ ಶಿರಸ್ತೇದಾರ್ ಸುಹಾಸ್ ಯರೇಶೀಮಿ ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಗೋದಾಮು ವ್ಯವಸ್ಥಾಪಕ ಸೋಮಶೇಖರ ಬುಡ್ಡನವರ, ವಿದ್ಯಾನಗರದ ಉಮಾಶಂಕರ ರೈಸ್‌ಮಿಲ್ ಮಾಲೀಕ, ಲಾರಿ ಮಾಲೀಕ ಮತ್ತು ಚಾಲಕರ ವಿರುದ್ಧ ಕ್ರಮ ಎಫ್‌ಐಆರ್ ದಾಖಲಾಗಿದೆ.

# ತೇಜಸ್ವಿ ಯಾದವ್ ಬಿಹಾರ ಸಿಎಂ ಅಭ್ಯರ್ಥಿ..?



**ಪಾಟ್ನಾ(ಪಿಟಿಐ):** ಬಿಹಾರಚುನಾವಣೆಯಲ್ಲಿ ಇಂಡಿಯಾ ಒಕ್ಕೂಟದಿಂದ ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಆಯ್ಕೆಯಾಗುವ ಸುಳಿವು ಸಿಕ್ಕಿದೆ.ಒಕ್ಕೂಟದ ಅಂಗವಾಗಿರುವ ಸಿಪಿಐ (ಎಂಎಲ್) ಲಿಬರೇಶನ್ ಪಕ್ಷದ ಪ್ರಧಾನ ಕಾರ್ಯದರ್ಶಿ ದೀಪಂಕರ್ ಭಟ್ಟಾಚಾರ್ಯ ಅವರು ಈ ಸುಳಿವು ನೀಡಿದ್ದಾರೆ.

ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಬಿಹಾರದಲ್ಲಿ ತೇಜಸ್ವಿ ಅವರೇ ಮುಖ್ಯಮಂತ್ರಿ ಅಭ್ಯರ್ಥಿ ಎಂಬ ಸಾಕಷ್ಟು ಸುಳಿವುಗಳನ್ನು ನೀಡಲಾಗಿದೆ ಎಂದು ಪ್ರತಿಪಾದಿಸಿದರು, ಆದರೆ ಔಪಚಾ–ರಿಕ ಘೋಷಣೆಯಾಗಿಲ್ಲದಿರಬಹುದು. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರು ಯಾದವ್ ಅವರನ್ನು ಮುಂದಿನ ಪ್ರಧಾನಿಯನ್ನಾಗಿ ಮಾಡಲು ಬಹಿರಂಗವಾಗಿ ಧ್ವನಿ ಎತ್ತಿದ್ದರೂ, ಯಾದವ್ ಅವರನ್ನು ಬಿಂಬಿಸಲು ಹಿಂಜರಿಯುತ್ತಿರುವ ಬಗ್ಗೆ ಇಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಈ ಹೇಳಿಕೆಗಳು ಬಂದವು.

ಬುದ್ಧಿವಂತರು ಸುಳಿವುಗಳನ್ನು ಗಮನಿಸಬಹುದು ಎಂದು ಭಟ್ಟಾಚಾರ್ಯ ವ್ಯಂಗ್ಯವಾಡಿದರು,ನಿನ್ನೆಯಷ್ಟೇ,ನೀವೆಲ್ಲರೂ ರಾಹುಲ್ ಮತ್ತು ತೇಜಸ್ವಿ ಪರಸ್ಪರ ಪಕ್ಕದಲ್ಲಿ ಮೋಟಾರ್ ಸೈಕಲ್ ಸವಾರಿ ಮಾಡುವುದನ್ನು ನೋಡಿದ್ದೀರಿ (ಮತದಾರ ಅಧಿಕಾರ ಯಾತ್ರೆಯ ಸಮಯದಲ್ಲಿ). ಇಂಡಿಯಾ ಬ್ಲಾಕ್ ಯಾವುದೇ ಔಪಚಾರಿಕ ಘೋಷಣೆ ಮಾಡದಿದ್ದರೂ, ಕಾಲಕಾಲಕ್ಕೆ ಸಾಕಷ್ಟು ಸುಳಿವುಗಳನ್ನು ನೀಡಲಾಗಿದೆ.

ಭಾನುವಾರ, ಅರಾರಿಯಾ ಜಿಲ್ಲೆಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ, ಮುಂಬರುವ ಬಿಹಾರ ವಿಧಾನಸಭಾ ಚುನಾವಣೆಗೆ ಯಾದವ್ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಘೋಷಿಸುವ ಬಗ್ಗೆ ಒಮ್ಮತ ಮೂಡಿದೆಯೇ ಎಂಬ ಪ್ರಶ್ನೆಗೆ ರಾಹುಲ್ ಗಾಂಧಿಯವರು ಅಡ್ಡಗಾಲು ಹಾಕಿದ್ದರು. ಇದು ಬಿಜೆಪಿಯ ರವಿಶಂಕರ್ ಪ್ರಸಾದ್ ಅವರಂತಹ ಹಿರಿಯ ನಾಯಕರು ಮತ್ತು ಕಾಂಗ್ರೆಸ್ ನಡುವೆ ವಿಶ್ವಾಸದ ಕೊರತೆ ಇದೆ ಎಂದು ಹೇಳಿಕೊಳ್ಳಲು ಕಾರಣವಾಯಿತು, ಇದು ಚುನಾವಣೆಯಲ್ಲಿ ಬಣದ ಪತನಕ್ಕೆ ಕಾರಣವಾಗುತ್ತದೆ.

ಒಕ್ಕೂಟವು ಅಧಿಕಾರಕ್ಕೆ ಬಂದರೆ ಯಾರು ಮುಖ್ಯಮಂತ್ರಿಯಾಗುತ್ತಾರೆ ಎಂಬುದರ ಬಗ್ಗೆ ಬಣದಲ್ಲಿ ಸಂಪೂರ್ಣ ಸ್ಪಷ್ಟತೆ ಇದೆ. ಮತ್ತೊಂದೆಡೆ ನಿತೀಶ್ ಕುಮಾರ್ ಅವರನ್ನು ಪ್ರಸ್ತುತತಮ್ಮಮುಖವಾಗಿಬಿಂಬಿಸಲಾಗುತ್ತಿದೆ ಎಂಬ ಬಗ್ಗೆ ಯಲ್ಲಿ ಸಂಪೂರ್ಣ ಸ್ಪಷ್ಟತೆ ಇದೆ, ಆದರೆ ಪರದೆಯ ಹಿಂದೆ ಆಟ ನಡೆಯುತ್ತಿದೆ ಎಂದು ಭಟ್ಟಾಚಾರ್ಯ ಹೇಳಿದ್ದಾರೆ.

# ಹಿಂದೂ–ಮುಸ್ಲಿಂ ಗೆಳೆಯರಿಂದ ಗಣೇಶನಿಗೆ ಪೂಜೆ, ಅಭಿಷೇಕ



**ಅಳವಂಡಿ :** ಕೊಪ್ಪಳ ತಾಲ್ಲೂಕಿನ ಅಳವಂಡಿ ಗ್ರಾಮದ ಬಜಾರದಲ್ಲಿರುವ ವಿಜಯ ಗಣಪತಿ ಮಂದಿರದಲ್ಲಿ ಗ್ರಾಮದ ಹಿಂದೂ – ಮುಸ್ಲಿಂ ಸಮುದಾಯದ ಗೆಳೆಯರ ಬಳಗದ ವತಿಯಿಂದ ಗಣೇಶ ಮೂರ್ತಿಗೆ ಬುಧವಾರ ವಿಶೇಷ ಪೂಜೆ ಹಾಗೂ ಅಭಿಷೇಕ ನಡೆಯಿತು.

ಗಣೇಶ ಚತುರ್ಥಿ ಅಂಗವಾಗಿ ದೇವಸ್ಥಾನದ ಗಣೇಶ ಮೂರ್ತಿಗೆ ಬೆಳಿಗ್ಗೆ ವಿಶೇಷ ಪೂಜೆ ಹಾಗೂ ಅಭಿಷೇಕ ನಡೆದವು. ಬಳಿಕ ಅನ್ನ ಸಂತರ್ಪಣೆ ವ್ಯವಸ್ಥೆ ಮಾಡಲಾಗಿತ್ತು. ಗಣೇಶ ದೇವಸ್ಥಾನವನ್ನು ತಳಿರು ತೋರಣಗಳಿಂದ ಅಲಂಕರಿಸಲಾಗಿತ್ತು.

ಪ್ರತಿವರ್ಷವೂ ಇಲ್ಲಿನ ಗೆಳೆಯರ ಬಳಗದ ವತಿಯಿಂದ ಈ ಕಾರ್ಯ ನಡೆಯುತ್ತಿದ್ದು, ಗೆಳೆಯರ ಬಳಗದಲ್ಲಿ ಹಿಂದೂ–ಮುಸ್ಲಿಂ ಎರಡು ಸಮಾಜದ ಸದಸ್ಯರಿದ್ದಾರೆ.

## ಅಖಂಡ ಭಾರತದ ಕನಸು ಕಂಡಿದ್ದ ಅಹಿಂಸವಾದಿ

# ಗಡಿನಾಡು ಗಾಂಧಿ ಗಫ್ಫಾರ್ ಖಾನ್

ಈಗಷ್ಟೇ ನಾವು 79ನೇ ಸ್ವಾತಂತ್ರೋತ್ಸವ ಆಚ–ರಿಸಿದ್ದೇವೆ ದೇಶದೆಲ್ಲಡೆ ಮಹಾತ್ಮಾ ಗಾಂಧಿ, ಸುಭಾಷ್ ಚಂದ್ರ ಬೋಸ್, ಭಗತ್ ಸಿಂಗ್, ನೆಹರು,ಅಬುಲ್ ಕಲಾಂ ಆಜಾದ್ ಅವರಂತಹ ಮಹಾನ್ ರಾಷ್ಟ್ರ ನಾಯಕರ ತ್ಯಾಗ, ಬಲಿದಾನ ಹಾಗೂ ದೇಶದ ಸ್ವಾತಂತ್ರ್ಯಕ್ಕಾಗಿ ಅವರು ಮಾಡಿದ ಕಾರ್ಯಗಳನ್ನು ಸ್ಮರಿಸಿದ್ದೇವೆ.

ಇದೇ ಸಾಲಿನಲ್ಲಿ ಮಹಾತ್ಮಾ ಗಾಂಧೀಜಿಯವರ ಅಹಿಂಸಾ ತತ್ವವನ್ನು ಬಲವಾಗಿ ಪ್ರತಿಪಾದಿಸಿ ಗಾಂಧೀಜಿಯವರೊಂದಿಗೆ ಪ್ರತಿ ಹಂತದಲ್ಲಿ ಹೆಜ್ಜೆಗೆ ಹೆಜ್ಜೆ ಹಾಕಿ ಹೆಗಲಿಗೆ ಹೆಗಲು ಕೊಟ್ಟ ಅಹಿಂಸೆಯ ಮೇರು ಸೇನಾನಿ ಗಡಿನಾಡು ಗಾಂಧಿ ಎಂಬ ಬಿರುದಿಗೆ ಪಾತ್ರರಾದ ಖಾನ್ ಅಬ್ದುಲ್ ಗಫ್ಫಾರ್ ಖಾನ್ ಮುಂಚೂಣಿಗೆ ನಿಲ್ಲುತ್ತಾರೆ. ಆದರೆ, ಅವರ ಬಗ್ಗೆ ಈಗಿನ ತಲೆಮಾರು ವಿಶೇಷವಾಗಿ ಯುವ ಪೀಳಿಗೆ ಅಷ್ಟೊಂದು ತಿಳಿದು ಕೊಂಡಿಲ್ಲ ಎಂದೇ ಹೇಳಬಹುದು.

1919ರ ರೌಲೆಕ್ಟ್ ಆ?ಯಕ್ಟ್ ಖಂಡಿಸಿ ಬ್ರಿಟೀಷ್ ಆಡಳಿತದ ವಿರುದ್ಧ ಭಾರತದ ಮಧ್ಯ ಭಾಗದಲ್ಲಿ ಮಹಾತ್ಮ ಗಾಂಧೀಜಿಯವರು ಅಹಿಂಸಾತ್ಮಕ ಚಳುವಳಿ ನಡೆಸುತ್ತಿದ್ದರೇ ಅದೇ ಸಮಯದಲ್ಲಿ ವಾಯುವ್ಯ ಭಾರತದ ಖೈಬರ್ ಕಣಿವೆಯ ಪಶ್ತೂನ್ ಎಂಬ ಪ್ರದೇಶದಲ್ಲಿ ಬ್ರಿಟೀಷರ ವಿರುದ್ಧ ಗಡಿನಾಡು ಗಾಂಧಿ ಖಾನ್ ಅಬ್ದುಲ್ ಗಫ್ಫಾರ್ ಖಾನ್ ತನ್ನ ಪಶ್ತೂನ್ ಜನಾಂಗದ ಜೊತೆ ಸೇರಿ ಅಹಿಂಸಾ ಚಳುವಳಿ ನಡೆಸುತ್ತಿದ್ದರು.

ಇದೇ ಸಂದರ್ಭದಲ್ಲಿ ಈ ಚಳುವಳಿಯ ನೇತೃತ್ವವನ್ನು ಯಾರು ವಹಿಸಿಕೊಳ್ಳಬೇಕು ಎಂಬ ಚರ್ಚೆ ನಡೆಯುತ್ತಿರುವಾಗ, 29 ವರ್ಷ ವಯಸ್ಸಿನ ಒಬ್ಬ ಯುವಕ ಎದ್ದು ನಿಂತು ಈ ಚಳುವಳಿಗೆ ತಿಳುವಳಿಕೆಯುಳ್ಳ, ವಯಸ್ಕರೊಬ್ಬರು ಮುಖ್ಯಸ್ಥರಾಗಬೇಕು ಎಂದು ಸಲಹೆ ನೀಡಿದ. ಆದರೆ, ಅಲ್ಲಿದ್ದ ಜನರೆಲ್ಲ ಒಮ್ಮತಾಭಿಪ್ರಾಯದಿಂದ ಆ ಯುವಕನನ್ನೇ ಚಳುವಳಿಯ ನೇತೃತ್ವ ಕೊಟ್ಟರು. ಜವಾಬ್ದಾ?–ರಿಯನ್ನು ಆ ಯುವಕ ಅತ್ಯಂತ ಸಮರ್ಥವಾಗಿ ನಿಭಾಯಿಸಿದನು. ಇದರಿಂದ ಪ್ರಭಾವಿತರಾದ ಜನರು ಆ ಯುವಕನನ್ನು ಬಾದ್‌ಶಾಹ್ ಖಾನ್ ಎಂಬ ಹೆಸರಿನಿಂದ ಕರೆದರು. ಈ ಚಳುವಳಿಯ ಪರಿಣಾಮವಾಗಿ ಅವರು ಮೊದಲ ಬಾರಿಗೆ ಸೆರೆವಾಸ ಅನುಭವವಿಸಬೇಕಾಯಿತು.


**ಜನನ ಮತ್ತು ಶಿಕ್ಷಣ**

ಬಾದ್‌ಶಾಹ್ ಖಾನ್, ಗಡಿನಾಡು ಗಾಂಧಿ ಎಂದು ಪ್ರಸಿದ್ಧರಾದ ಖಾನ್ ಅಬ್ದುಲ್ ಗಫ್ಫಾರ್ ಖಾನ್ ಅವರ ಜನನ 1890ರಲ್ಲಿ ಹಶ್ತ್ ನಗರದ ಉತ್ಮಂಜೈ ಗ್ರಾಮದಲ್ಲಿ ಶ್ರೀಮಂತ ಹಾಗೂ ಸಂಪ್ರದಾಯಸ್ಥ ಮುಸ್ಲಿಂ ಕುಟುಂಬದಲ್ಲಿ ಆಯಿತು. ಇವರ ತಂದೆ ಅಬ್ದುಲ್ ಬಹ್ರಾಮ್ ಖಾನ್ ಹಶ್ತ್ ನಗರದ ಜಮೀನ್ದಾರರು ಆಗಿದ್ದರು.

ಮದರಸಾದಲ್ಲಿ ಧಾರ್ಮಿಕ ಶಿಕ್ಷಣ ಮಾತ್ರ ಪಡೆಯಬೇಕೆಂಬ ಅಲಿಖಿತ ನಿಯಮ ಇತ್ತು. ಇಂಗ್ಲಿಷ್‌ಭಾಷೆಯಕಲಿಕೆಗೆಧಾರ್ಮಿಕಪಂಡಿತರ (ಉಲೆಮಾ) ವಿರೋಧವಿತ್ತು. ಇಂತಹ ಪ್ರತಿ–ಕೂಲ ಪರಿಸ್ಥಿತಿಯಲ್ಲಿ ಮಿಷನರಿ ಶಾಲೆಯಲ್ಲಿ ಶಿಕ್ಷಣ ಪಡೆದ ಖಾನ್ ಮತ್ತು ಅವರ ಸಹೋದರ ಜಬ್ಬಾರ್ ಖಾನ್ ಮೊದಲಿಗರಾಗಿದ್ದರು. ಎಡ್ವರ್ಡ್ ಮೆಮೋರಿಯಲ್ ಶಾಲೆಯಲ್ಲಿ ಇಬ್ಬರು ಸಹೋದರರು ಪ್ರೌಢ ಶಾಲಾ ಶಿಕ್ಷಣ ಪಡೆದರು. ಬಳಿಕ ಸಹೋದರ ಜಬ್ಬಾರ್ ಖಾನ್ ಲಂಡನ್‌ನಲ್ಲಿ ವೈದ್ಯಕೀಯ ಶಿಕ್ಷಣ ಪಡೆದರು. ತನ್ನ ಎರಡನೇ ಮಗನನ್ನು ತನ್ನಿಂದ ದೂರ ಇರಲು ತಾಯಿ ಒಪ್ಪದ ಕಾರಣ ಖಾನ್ ಅಬ್ದುಲ್ ಗಫ್ಫಾರ್ ಖಾನ್ ಅಲಿಗಢ್ ಮುಸ್ಲಿಂ ವಿವಿಯಲ್ಲಿ ಉನ್ನತ ಶಿಕ್ಷಣ ಪಡೆದರು.

ಈ ಮಧ್ಯೆ ತಮ್ಮ ಒಬ್ಬ ಸೇವಕನ ಸಲಹೆ ಮೇರೆಗೆ ಗಫ್ಫಾರ್ ಖಾನ್ ಬ್ರಿಟೀಷ್ ಸೈನ್ಯ ಸೇರಬಯಸಿದರು. ಆ ದಿನಗಳಲ್ಲಿ ಇಂಗ್ಲಿಷ್ ಕಮಾಂಡ್ ಅಡಿಯಲ್ಲಿ ಭಾರತೀಯ ಸೈನ್ಯ ದಳ ಇತ್ತು ಅದನ್ನು ಗೈಡ್ಸ್ ಕಾಪ್ಸ್ ಎಂದು ಕರೆಯಲಾಗುತ್ತಿತ್ತು. ಇದರಲ್ಲಿ ಭಾರತೀಯರನ್ನು ಸಹ ಬ್ರಿಟೀಷರೊಂದಿಗೆ ಅಧಿಕಾರಿಗಳಾಗಿ ನೇಮಕ ಮಾಡಲಾಗುತ್ತಿತ್ತು. ತನ್ನನ್ನು ಗೈಡ್ಸ್ ಕಾಪ್ಸ್ ನಲ್ಲಿ ಕಮಿಷನರ್ ಅಧಿಕಾರಿಯಾಗಿ ನೇಮಿಸಿಕೊಳ್ಳಲು ಗಫ್ಫಾರ್ ಖಾನ್ ಅರ್ಜಿ ಹಾಕಿದರು. ಆ ಅರ್ಜಿಗೆ ಮಂಜೂರಾತಿ ಸಹ ಸಿಕ್ಕಿತ್ತು. ಆದರೆ, ಅವರು ತರಬೇತಿಗೆ ಹೋಗುವ ಮೊದಲೇ ಭಾರತೀಯ ಅಧಿಕಾರಿಯನ್ನು ಬ್ರಿಟೀಷ್ ಅಧಿಕಾರಿಯೊಬ್ಬ ಅವಮಾನಿಸುತ್ತಿರುವುದನ್ನು ಕಂಡು ಖಾನ್ ತನ್ನ ನಿರ್ಧಾರ ಬದಲಾಯಿಸಿದರು. ಈ ಘಟನೆ ಅವರಲ್ಲಿ ಬ್ರಿಟೀಷರ ವಿರುದ್ಧ ದ್ವೇಷ ಹುಟ್ಟುವಂತೆ ಮಾಡಿತು.

1915ರಿಂದ 1918ರವರೆಗೆ ಖಾನ್ ಅವರು ತನ್ನ ಪಶ್ತೂನ್ ಜನರನ್ನು ಉನ್ನತೀಕ–ರಿಸಲು ಶಿಕ್ಷಣವೇ ದಾರಿ ಎಂದು ಅರಿತು ತನ್ನ ಜನರಲ್ಲಿ ಶಿಕ್ಷಣದ ಬಗ್ಗೆ ಅರಿವು ಮೂಡಿಸಲು ಆರಂಭಿಸಿದರು. ಇಸ್ಲಾಂ ಧರ್ಮ ಶಿಕ್ಷಣಕ್ಕೆ ಎಂದೂ ಅಡ್ಡಿಯಾಗಿಲ್ಲ. ಬದಲಾಗಿ ಗಂಡು ಮತ್ತು ಹೆಣ್ಣಿಗೆ ಶಿಕ್ಷಣದ ಸಮಾನ ಹಕ್ಕು ಕಲ್ಪಿಸಿದೆ. ಇದನ್ನು ಅರಿಯಿರಿ ಎಂದು ಅವರು



500 ಗ್ರಾಮಗಳನ್ನು ಸುತ್ತಿ ಶಿಕ್ಷಣದ ಮಹತ್ವ ಮತ್ತು ಅರಿವು ಮೂಡಿಸಲಾರಂಭಿಸಿದರು. ಇದಕ್ಕಾಗಿ ಅನೇಕ ಗ್ರಾಮಗಳಲ್ಲಿ ಶಾಲೆಗಳನ್ನು ಸ್ಥಾ?ಪಿಸಿದರು.

**ದೇವ ಸೇವಕರ ಸಂಘ ಸ್ಥಾಪನೆ**

ಖಾನ್ ಅವರು ಓರ್ವ ಜಾತ್ಯಾತೀತ ವ್ಯಕ್ತಿ ಆಗಿದ್ದ–ರಿಂದ ಅಖಂಡ ಸ್ವತಂತ್ರ ಹಾಗೂ ಜಾತ್ಯಾತೀತ ಭಾರತವನ್ನು ರೂಪಿಸುವ ಗುರಿ ಸಾಧಿಸಲು 1929ರಲ್ಲಿ ತಮ್ಮದೇ ಆದ 'ಖುದಾಯಿ ಖಿದ್ಮತ್‌ಗಾರ್' (ದೇವರ ಸೇವಕರು) ಎಂಬ ಸಂಘಟನೆ ಸ್ಥಾ?ಪಿಸಿದರು. ಈ ಸಂಘಟನೆ ಬ್ರಿಟೀಷರಲ್ಲಿ ಭಯ ಮತ್ತು ಕಳವಳ ಹುಟ್ಟು ಹಾಕಿತ್ತು. 1930ರಲ್ಲಿ ಉಪ್ಪಿನ ಸತ್ಯಾಗ್ರಹ ನಡೆದ ಸಂದರ್ಭದಲ್ಲಿ ಬಾದ್‌ಶಾಹ್ ಖಾನ್ ಅವರನ್ನು ಬಂಧಿಸಲಾಯಿತು. ಇದನ್ನು ವಿರೋಧಿಸಿ ಪೇಶಾವರದ ಕಿಸ್ಸಾಖ್ವಾನಿ ಬಜಾರ್‌ನಲ್ಲಿ ಖುದಾಯಿ ಖಿದ್ಮತ್‌ಗಾರ್ ಸಂಘಟನೆಯ ಸ್ವಯಂ ಸೇವಕರು ಪ್ರತಿಭಟನೆ ನಡೆಸಿದರು. ಬ್ರಿಟೀಷರ ಸರ್ಕಾರ ಅವರ ಗುಂಡು ಹಾ–ರಿಸಲು ಫರ್ಮಾನು ಹೊರಡಿಸಿತು. ನಿರ್ದಯಿ ಬ್ರಿಟೀಷ್ ಸೈನಿಕರು ನಿರಾಯುಧ ಗುಂಪಿನ ಮೇಲೆ ಗುಂಡಿನ ದಾಳಿ ನಡೆಸಿದರು. ಅಂ–ದಾಜು 200ಕ್ಕೂ ಅಧಿಕ ಅಹಿಂಸಾ ಪ್ರತಿಪಾದಕ ಸೇನಾನಿಗಳು ಪ್ರಾಣ ಬಿಟ್ಟರು.

'ಖಾನ್ ಅಬ್ದುಲ್ ಗಫ್ಫಾ?ರ್ ಖಾನ್ ತನ್ನ ಖುದಾಯಿ ಖಿದ್ಮತ್‌ಗಾರ್ ಸಂಘಟನೆಯ ಸ್ವಯಂಸೇವಕರಿಗೆ ಹೀಗೆ ಉಪದೇಶ ಮಾಡಿದರು.

'ಪೊಲೀಸ್ ಮತ್ತು ಸೈನ್ಯವನ್ನು ಸೋಲಿಸುವ ಒಂದು ಅಸ್ತ್ರವನ್ನು ನಾನು ನಿಮಗೆ ನೀಡುತ್ತಿದ್ದೇನೆ. ಅದು ಪ್ರವಾದಿ ಮುಹಮ್ಮದ್ (ಸ)ರವರ ಅಸ್ತ್ರವಾಗಿದೆ. ಆದರೆ, ಅದರ ಬಗ್ಗೆ ನಿಮಗೆ ತಿಳಿದಿಲ್ಲ. ಆ ಅಸ್ತ್ರವೇನೆಂದರೆ ತಾಳ್ಮೆ ಮತ್ತು ಸದಾಚಾರ. ಈ ಅಸ್ತ್ರದ ವಿರುದ್ಧ ಭೂಮಿಯ ಯಾವ ಶಕ್ತಿಯೂ ನಿಲ್ಲಲಾರದು ಎಂದು ಹೇಳುತ್ತಿದ್ದರು. ಇದೇ ಅಸ್ತ್ರ ಮತ್ತು ತತ್ವವನ್ನು ಪಾಲಿಸುತ್ತಾ ಸ್ವಯಂಸೇವಕರು ಸೇವೆ ಸಲ್ಲಿಸುತ್ತಿದ್ದರು. ಇದೇ ಖುದಾಯಿ ಖಿದ್ಮತ್‌ಗಾರ್ ಸಂಘಟನೆಯ ಸ್ವಯಂಸೇವಕರು ಕಾಂಗ್ರೆಸ್ ಪಕ್ಷದೊಂದಿಗೆ ಸೇರಿ ಭಾರತದ ಸ್ವತಂತ್ರಕ್ಕಾ?ಗಿ ಬ್ರಿಟೀಷರ ವಿರುದ್ಧ ಸೆಣೆಸಾಡಿದರು. ಈ ಹೋರಾಟದಲ್ಲಿ ಕಾಂಗ್ರೆಸ್ ಪಕ್ಷದ ಗೆಲುವಿನಲ್ಲಿ ಖುದಾಯಿ ಖಿದ್ಮತ್‌ಗಾರ್ ಸಂಘಟನೆಯ ಸ್ವಯಂಸೇವಕರ ಪಾತ್ರ ಮಹತ್ವದ್ದಾಗಿದೆ.

**ಹುದ್ದೆ ನಿರಾಕರಿಸಿದ ನಿಸ್ವಾರ್ಥವಾದಿ:**

ಖಾನ್ ಅಬ್ದುಲ್ ಗಫ್ಫಾರ್ ಖಾನ್ ಅವರಿಗೆ 1931ರಲ್ಲಿ ಕಾಂಗ್ರೆಸ್ ಪಕ್ಷ ತನ್ನ ಪಕ್ಷದ ಅಧ್ಯಕ್ಷ ಸ್ಥಾನ ನೀಡಲು ಮುಂದಾಯಿತು. ಆದರೆ, ನಾನೊಬ್ಬ ಸರಳ ಸ್ವತಂತ್ರ ಸೇನಾನಿಯಾಗಿದ್ದು, ನನ್ನ ಖುದಾಯಿ ಖಿದ್ಮತ್‌ಗಾರ್ ಸಂಘಟನೆಯ ಸ್ವಯಂಸೇವಕರು ಸೇವೆ ಸಲ್ಲಿಸಲು ಮಾತ್ರ ಬಯಸುತ್ತೇವೆ ಎಂದು ಅಧ್ಯಕ್ಷ ಹುದ್ದೆಯನ್ನು ನಿರಾಕರಿಸಿದರು.

**ವಿಭಜನೆಯ ಕಟ್ಟಾ ವಿರೋಧಿ**

ಖಾನ್ ಅಬ್ದುಲ್ ಗಫ್ಫಾರ್ ಖಾನ್ ಭಾರತದ ವಿಭಜನೆಯ ಕಟ್ಟಾ ವಿರೋಧಿಯಾಗಿದ್ದರು. ಹಿಂದೂ–ಮುಸ್ಲಿಂ ಸೌಹಾರ್ದತೆಗೆ ಶ್ರಮಿಸಿದ ಅಖಂಡ ಭಾರತದ ಕನಸನ್ನು ಕಂಡ ಈ ದೇಶಪ್ರೇಮಿಗೆ ವಿಭಜನೆಯ ವಿಷಯ ತೀವ್ರ ದುಃಖ:ದ ಸಂಗತಿಯಾಗಿತ್ತು. ಕೆಲವರು ಖಾನ್ ಅವರು ಮುಸ್ಲಿಂ ವಿರೋಧಿ ಎಂದು ಅವರ ಮೇಲೆ ಹಲ್ಲೆ ಸಹ ನಡೆಸಿದರು. ವಿಭಜನೆ ಹಿನ್ನೆಲೆಯಲ್ಲಿ ಕೋಮುಗಲಭೆ, ಹಿಂಸಾಚಾರ, ಕೊಲೆಗಳು ನಡೆದಾಗ ಜನರನ್ನು ಕುರಿತು ಅವರು ಹೀಗೆ ಹೇಳಿದ್ದರು, ಯಾರೆಲ್ಲ ಕೋಮುಗಲಭೆ ಉಂಟು ಮಾಡುತ್ತಾರೋ, ಹಿಂಸಾಚಾರದಲ್ಲಿ ತೊಡಗಿ ಕೊಲೆಗಳನ್ನು ಮಾಡುತ್ತಾರೋ, ಮನೆಗಳಿಗೆ ಬೆಂಕಿ ಹಚ್ಚುತ್ತಾರೋ ಅವರು ಧರ್ಮನಿಷ್ಠರು ಅಲ್ಲ. ದೇವರ ಧರ್ಮ ಇದನ್ನು ಹೇಳಿಕೊಡುವುದಿಲ್ಲ. ದೇವರ ಧರ್ಮ ಪ್ರೀತಿಸುವ ಧರ್ಮವಾಗಿದೆ. ಧರ್ಮ ಯಾವಾಗಲೂ ಮಾನವೀಯತೆಯನ್ನು ಸಾರುತ್ತದೆ ಎಂದರು.

ಈ ಮಧ್ಯೆ ಖಾನ್ ಅಬ್ದುಲ್ ಗಫ್ಫಾರ್ ಖಾನ್ ಹಾಗೂ ಅವರ ಖುದಾಯಿ ಖಿದ್ಮತ್‌ಗಾರ್ ಸಂಘಟನೆಯ ಸ್ವಯಂ ಸೇವಕರಿಗೆ ತಿಳಿಸದೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ವಿಭಜನೆಯ ಪ್ರಸ್ತಾಪ ಒಪ್ಪಿಕೊಂಡಿದೆ ಎಂದು ಗೊತ್ತಾದಾಗ ಅದನ್ನು ಖಾನ್ ಅವರು ತೀವ್ರವಾಗಿ ವಿರೋಧಿಸಿದರು. ಅಲ್ಲದೇ ಒಲ್ಲದ ಮನಸ್ಸಿನೊಂದಿಗೆ ಅವರು ಪಾಕಿಸ್ತಾನದ ಪೌರತ್ವ ಒಪ್ಪಿಕೊಂಡರು. ಅವರ ಅಖಂಡ ಭಾರತದ ಕನಸು ಈಡೇರಿಲ್ಲ ಅನ್ನುವ ನೋವು ಅವರನ್ನು ತೀವ್ರವಾಗಿ ಕಾಡಿತು. ದೇಶ ವಿಭಜನೆ ಬಳಿಕ ಪಾಕಿಸ್ತಾನದಲ್ಲಿದ್ದ ಹಲವಾರು ಹಿಂದೂಗಳನ್ನು ಸುರಕ್ಷಿತವಾಗಿ ಭಾರತಕ್ಕೆ ತಲುಪಿಸುವ ಕೆಲಸ ಅವರು ಮಾಡಿದರು.

**ನಿಷ್ಠೆಯನ್ನು ಅನುಮಾನಿಸಿದ ಪಾಕಿಸ್ತಾನ**

ಪಾಕಿಸ್ತಾನ ರಚನೆ ಬಳಿಕ 1948ರಲ್ಲಿ ಅವರು ಪಾಕಿಸ್ತಾನ ನಿಷ್ಠೆಯ ಪ್ರಮಾಣ ವಚನ ಸ್ವೀಕ–ರಿಸಿದರು. ಆದರೂ, ಅವರ ನಿಷ್ಠೆಯ ಬಗ್ಗೆ ಆ ದೇಶ ಅನುಮಾನಗಳಿಂದ ನೋಡಿತು. 1948ರಿಂದ 1954ರವರೆಗೆ ಯಾವುದೇ ಅಪರಾಧವಿಲ್ಲದೆ ಅವರನ್ನು ಗೃಹಬಂಧನದಲ್ಲಿ ಇರಿಸಲಾಯಿತು. ಜೈಲಿನಿಂದ ಬಿಡುಗಡೆಯಾದ ಅವರು ರಾಷ್ಟ್ರೀಯ ಅಸೆಂಬ್ಲಿಯಲ್ಲಿ ಭಾಷಣ ಮಾಡಿದರು. ಈ ವೇಳೆ ಬಾಬ್ರಾ ಪ್ರದೇಶದಲ್ಲಿ ನಡೆದ ಅವರ ಬೆಂಬಲಿಗರ ಹತ್ಯಾಕಾಂಡವನ್ನು ಖಂಡಿಸಿದರು. 1962ರಲ್ಲಿ ಖಾನ್ ಅವರನ್ನು ಅಮ್ನೆಸ್ಟಿ ಇಂಟರ್‌ನ್ಯಾಷನಲ್ ವರ್ಷದ ಕೈದಿ ಎಂದು ಹೆಸರಿಸಿತು. 1969ರಲ್ಲಿ ಗಾಂಧೀ–ಜಿಯ 100ನೇ ಜನ್ಮ ದಿನಾಚರಣೆಗೆ ಭಾರತಕ್ಕೆ ಆಹ್ವಾನಿಸಲಾಯಿತು. ಈ ಸಂದರ್ಭದಲ್ಲಿ ಜವಾಹರಲಾಲ್ ನೆಹರು ಮೆಮೊರಿಯಲ್ ಪ್ರಶಸ್ತಿ ನೀಡಲಾಯಿತು. ಪ್ರಶಸ್ತಿ ಸ್ವೀಕರಿಸಿ ಮಾಡಿದ ಭಾಷಣದಲ್ಲಿ ಅವರು ಹೀಗೆ ಹೇಳಿದ್ದರು. 'ನಾನು ಮತ್ತು ನನ್ನ ಖುದಾಯಿ ಖಿದ್ಮತ್‌ಗಾರ್ ಸಂಘಟನೆಯ ಸ್ವಯಂಸೇವಕರು ಭಾರತ ದೇಶದ ಸ್ವಾ?ತಂತ್ರ್ಯಕ್ಕಾಗಿ ತಮ್ಮ 15 ವರ್ಷಗಳನ್ನು ನೀಡಿದೆವು. ಆದರೆ, ಭಾರತದ ಭವಿಷ್ಯ ಬರೆಯುವವರು ನಮ್ಮನ್ನು ತೋಳಗಳಿಗೆ ಒಪ್ಪಿಸಿಬಿಟ್ಟರು' ಎಂದರು.

ಇದೇ ವೇಳೆ ತಮ್ಮ ಆಪ್ತ ಸ್ನೇಹಿತ ಗಾಂಧೀ–ಜಿಯವರನ್ನು ನೆನೆದು ಭಾರತೀಯರಿಗೆ ಈ ರೀತಿ ಉಪದೇಶ ಮಾಡಿದ್ದರು. ನೀವು ಗಾಂಧೀ–ಜಿಯವರ ಮೌಲ್ಯಗಳನ್ನು ಮರೆತುಬಿಟ್ಟಿದ್ದೀರಾ? ನೀವೇನು ಭಾವಿಸುತ್ತೀರಿ, ನೀವು ಗಾಂಧಿಯವ–ರಿಗೆ ನಷ್ಟ ಮಾಡುತ್ತಿದ್ದೀರಿ ಅಂತ, ಇಲ್ಲ ನಿಮಗೆ ನೀವೇ ನಷ್ಟ ಮಾಡಿಕೊಳ್ಳುತ್ತಿದ್ದೀರಿ, ಅವರ ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಅವಶ್ಯಕತೆ ನಿಮಗಿದೆ ಎಂದರು.

**ಭಾರತ ರತ್ನ ಆದ ಗಡಿನಾಡು ಗಾಂಧಿ**

ಖಾನ್ ಅಬ್ದುಲ್ ಗಫ್ಫಾರ್ ಖಾನ್ ಅವರ ಸತ್ಯ, ಅಹಿಂಸೆ ಮತ್ತು ಸ್ವಾತಂತ್ರ್ಯದ ಹೋರಾಟದ ಸೇವೆಗೆ ಭಾರತ ಸರ್ಕಾರ 1987ರಲ್ಲಿ ಅವ–ರಿಗೆ ದೇಶದ ಅತ್ಯುನ್ನತ ನಾಗರಿಕ ಗೌರವ ಪ್ರಶಸ್ತಿಯಾದ ಭಾರತ ರತ್ನ ನೀಡಿ ಗೌರವಿಸಿತು. 1988ರಲ್ಲಿ ಪೇಶಾವರಲ್ಲಿ ಗೃಹಬಂಧನದಲ್ಲಿ ಇರುವಾಗಲೇ ಅವರ ನಿಧನವಾಯಿತು. ಅವರ ಇಚ್ಛೆಯಂತೆ ಅವರನ್ನು ಅಫ್ಘಾನಿಸ್ತಾನದ ಜಲಾಲ್‌ಬಾಗ್‌ನಲ್ಲಿರುವ ಸಮಾಧಿ ಮಾಡಲಾಯಿತು.

ಖಾನ್ ಅಬ್ದುಲ್ ಗಫ್ಫಾರ್ ಖಾನ್ ಅವರು ತಮ್ಮ 98 ವರ್ಷದ ಬದುಕಿನಲ್ಲಿ ಸುಮಾರು 39 ವರ್ಷ ಜೈಲಿನಲ್ಲಿ ಕಳೆದರು. ರೀತಿ ತನ್ನ ಇಡೀ ಜೀವನನ್ನು ದೇಶದ ಸ್ವಾತಂತ್ರ್ಯ, ಜನರ ಕಲ್ಯಾಣ, ಕೋಮುಸೌಹಾರ್ದತೆಗೆ ಮುಡುಪಾಗಿಟ್ಟ ಗಡಿನಾಡು ಗಾಂಧಿ, ಜನೋಪಕಾರ ಕಾರ್ಯಗಳನ್ನು ಮಾಡುವಾಗ ಜನರ ಜಾತಿ–ಧರ್ಮಗಳನ್ನು ನೋಡಿಲ್ಲ. ಇಸ್ಲಾಂ ಧರ್ಮದ ಚೌಕಟ್ಟಿನಲ್ಲಿಯೇ ಮಾನವೀಯ ಧರ್ಮವನ್ನು ಸಾರುತ್ತಾ ಜನರಿಗೆ ಅಹಿಂಸೆ ಮತ್ತು ಸೌಜನ್ಯತೆಯ ಪಾಠ ಕಲಿಸಿದ ಮಹಾನುಭಾವ ಇವರು.

ಕೊನೆವರೆಗೆ ನಿಸ್ವಾರ್ಥವಾಗಿ ಅಖಂಡ ಭಾರತದ ಜನರ ಒಳಿತು ಮತ್ತು ಒಗ್ಗಟ್ಟಿಗಾಗಿ, ಶ್ರಮಿಸಿದ ಅವರು, ಹಿಂದೂ–ಮುಸ್ಲಿಂ ಸೌಹಾರ್ತೆ ಹಾಗೂ ಅಖಂಡ ಭಾರತದ ಕನಸನ್ನು ಕನವರಿಸುತ್ತಲೇ ಇಹಲೋಕ ತ್ಯಜಿಸಿದರು. ಇಂದಿನ ಮತ ಬೇಧ, ಮೇಲು–ಕೀಳು, ಕೋಮು ವೈಷಮ್ಯದ ದುರಾಲೋಚನೆಗಳ ಸಂದರ್ಭದಲ್ಲಿ ಈ ಸಮಾಜಕ್ಕೆ ಮತ್ತೇ ರಾಷ್ಟ್ರಪಿತ ಮಹಾತ್ಮಗಾಂಧೀಜಿ ಮತ್ತು ಗಡಿನಾಡು ಗಾಂಧಿ ಖಾನ್ ಅಬ್ದುಲ್ ಗಫ್ಫಾರ್ ಖಾನ್ ಅವರಂತಹ ನಾಯಕರ ಅವಶ್ಯಕತೆ ಇದೆ.

**– ಕೃಪೆ : ಸನ್ಮಾರ್ಗ**

**ಸೈಯದಾ ಖುದ್ಸಿಯಾ ಬಾನು,**
**ಲಿಂಗಸುಗೂರು**
**ಎಂ.ಎ (ಇತಿಹಾಸ)**

## ರಾಷ್ಟ್ರಮಟ್ಟಕ್ಕೆ ಆಯ್ಕೆ



**ಮಹಾಲಿಂಗಪುರ:** ಇತ್ತೀಚೆಗೆ ವಿಜಯಪುರದ ಡಾ. ಬಿ. ಆರ್. ಅಂಬೇಡ್ಕರ್ ಕ್ರೀಡಾಂಗಣದಲ್ಲಿ ನಡೆದ ರಾಜ್ಯ ಮಟ್ಟದ ರೋಪ್ ಸ್ಕಿಪ್ಪಿಂಗ್ ಸ್ಪರ್ಧೆಯಲ್ಲಿ ಸಮೀಪದ ಕೆಸರಗೊಪ್ಪ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿಗಳು ಚಿನ್ನದ ಪದಕ ಪಡೆದುಕೊಂಡು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಕರ್ನಾಟಕ ರಾಜ್ಯ ರೋಪ್ ಸ್ಕಿಪ್ಪಿಂಗ್ ಅಸೋಶಿಯೇಶನ್ ಹಾಗೂ ಫ್ರೀ ಸ್ಟೈಲ್ ರೋಪ್ ಸ್ಕಿಪ್ಪಿಂಗ್ ಅಸೋಸಿಯೇಷನ್ ವಿಜಯಪುರ ಇವರ ಸಹಯೋಗದಲ್ಲಿ ನಡೆದ ಚಾಂಪಿಯನ್ಸ್–2025 ಸ್ಪರ್ಧೆಯಲ್ಲಿ ಕೆಸರಗೊಪ್ಪ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿಗಳಾದ ವಿನಯ್ ಇರಗಾರ್ ಇಂಡೋರನ್ಸ್ (ಚಿನ್ನ), ದರ್ಶನ್ ಕಲ್ಲಟ್ಟಿ ಡಬಲ್ ಅಂಡರ್ ಇವೆಂಟ್ (ಚಿನ್ನ), ಮಲ್ಲಿಕಾರ್ಜುನ್ ಢವಳೇಶ್ವರ ಸ್ಪೀಡ್ ಸ್ಪ್ರಿಂಟ್, ಲಕ್ಕಮ್ಮ ಮಿರ್ಜಿ ಫ್ರೀ ಸ್ಟೈಲ್ (ಚಿನ್ನ), ಡಬಲ್ ಅಂಡರ್ (ಬೆಳ್ಳಿ), ಲಕ್ಷ್ಮಿ ಪೂಜಾರಿ ಇಂಡೋರನ್ಸ್ ಇವೆಂಟ್ (ಬೆಳ್ಳಿ,) ಸ್ಪ್ರಿಂಟ್ (ಚಿನ್ನ), ಬಾಲಕರ ಗ್ರೂಪ್ ಇವೆಂಟ್ (ಬೆಳ್ಳಿ), ಸ್ಪೀಡ್ ಸ್ಪ್ರಿಂಟ್ ರೀಲೆ (ಚಿನ್ನ), ಬಾಲಕಿಯರ ಗುಂಪು ವಿಭಾಗ ಫ್ರೀ ಸ್ಟೈಲ್ (ಚಿನ್ನ) ಸೇರಿದಂತೆ ಒಟ್ಟು 5 ಚಿನ್ನ, 6 ಬೆಳ್ಳಿ, 3 ಕಂಚಿನ ಪದಕಗಳನ್ನು ಪಡೆದುಕೊಂಡಿದ್ದಾರೆ.

ಶಾಲೆಯ ದೈಹಿಕ ಶಿಕ್ಷಣದ ಶಿಕ್ಷಕ ಸಂಗಮೇಶ ಮುಕಾರ್ತೀಹಾಳ ಮಾರ್ಗದರ್ಶನದಲ್ಲಿ ಸುರೇಶ ಬೂದಿಹಾಳ ತರಬೇತಿ ನೀಡಿದ್ದರು. ರಾಷ್ಟ್ರಮಟ್ಟಕ್ಕೆ ಆಯ್ಕೆಯಾದ ಎಲ್ಲಾ ಕ್ರೀಡಾ ಪಟುಗಳನ್ನು ಶಾಲೆಯ ಎಸ್ಡಿಎಂಸಿ ಅಧ್ಯಕ್ಷರು ಹಾಗೂ ಸರ್ವ ಸದಸ್ಯರು, ಮುಖ್ಯೋಪಾಧ್ಯಾಯರು ಹಾಗೂ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

## ಧರ್ಮ ರಕ್ಷಣೆ ಕಾರ್ಯ ಓಂ ಶಾಂತಿಯಿಂದ ಸಾಧ್ಯ



**ರಬಕವಿ–ಬನಹಟ್ಟಿ :** ಓಂ ಶಾಂತಿ ಸಂಸ್ಥೆಯು ಅನೇಕ ಸಾಮಾಜಿಕ ಕೆಲಸವನ್ನು ಮಾಡುತ್ತಿದೆ. ಆತ್ಮ ಪರಮಾತ್ಮನಿಂದ ಸೃಷ್ಟಿಯಾಗಿದೆ. ಸಮಾಜ ಪರಿವರ್ತನೆ,

ಧರ್ಮವಂತ ರನ್ನಾಗಿಸುವುದು, ಧರ್ಮ ರಕ್ಷಣೆ ಕಾರ್ಯವನ್ನು ಓಂ ಶಾಂತಿಯವರು ಮಾಡುತ್ತಿದ್ದಾರೆ ಎಂದು ತೇರದಾಳ ಮತಕ್ಷೇತ್ರದ ಶಾಸಕ ಸಿದ್ದು ಸವದಿ ಹೇಳಿದರು.

ಅವರು ಬನಹಟ್ಟಿಯ ಅಶೋಕ ಕಾಲನಿಯಲ್ಲಿರುವ ಓಂ ಶಾಂತಿ ಆಶ್ರಯದಲ್ಲಿ ರಾಜಯೋಗಿನಿ ದಾದಿ ಪ್ರಕಾಶಮಣಿಜೀಯವರ ಹದಿನೆಂಟನೇ ಪುಣ್ಯ ಸ್ಮರಣೋತ್ಸವ ನಿಮಿತ್ಯವಾಗಿ ಹಮ್ಮಿಕೊಂಡ ಬೃಹತ್ ರಕ್ತದಾನ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು. ನಮ್ಮ ದೇಶ ಧರ್ಮದ ಮೇಲೆ ನಿಂತಿದೆ. ಓಂ ಶಾಂತಿ ಧರ್ಮದ ಜ್ಞಾನವನ್ನು ವಿಶ್ವಕ್ಕೆ ನೀಡುತ್ತಿದೆ. ಪ್ರಕಾಶ ಮಣಿಜೀಯವರ ಹದಿನೆಂಟನೇ ಪುಣ್ಯ ಸ್ಮರಣೋತ್ಸವ ನಿಮಿತ್ಯವಾಗಿ ಹಮ್ಮಿಕೊಂಡ ರಕ್ತದಾನ ಶಿಬಿರದಲ್ಲಿ ಪ್ರತಿಯೊಬ್ಬರೂ ಪಾಲ್ಗೊಂಡು ಉತ್ತಮ ಆರೋಗ್ಯವನ್ನು ಹೊಂದಿರಿ ಎಂದರು.

ಕಾರ್ಯಕ್ರಮದಲ್ಲಿ ಬನಹಟ್ಟಿಯ ಓಂ ಶಾಂತಿಯ ಮಾಲಾ ಅಕ್ಕನವರು, ಗೀತಾ ಅಕ್ಕನವರು, ಬ್ರಹ್ಮಕುಮಾರ ಬಿ. ಎಂ. ಪಾಟೀಲ, ಧರೆಪ್ಪ ಉಳ್ಳಾಗಡ್ಡಿ, ಡಾ. ರುದ್ರಸ್ವಾಮಿಮಠ, ಸುನೀಲ ಮಮದಾಪುರ, ಶೇಖರ ಹಕ್ಕಲದಡ್ಡಿ, ಬಿ. ಕೆ. ಜಾನಕ್ಕಿ, ರಾಮದಾಸ ಸಿಂಘಣ, ಎಸ್. ಕೆ. ಹುನ್ನೂರ, ರಾಜು ಬಾವಲತ್ತಿ, ಜಗದೀಶ ಕುಂಚನೂರ, ಮಹಾದೇವ ಭದ್ರದ, ಸುನೀಲ ಹನಗಂಡಿ, ಅಶೋಕ ತಿಮ್ಮಶೆಟ್ಟಿ, ನಿಲೇಶ ಹಜಾರೆ, ಈರಪ್ಪ ಹಿಪ್ಪರಗಿ, ಉಷಾ ರುದ್ರಸ್ವಾಮಿಮಠ, ಸುನಂದಾ ಸಿಂಘಣ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

## ಕೆ.ಎಲ್.ಇ. ಸಂಸ್ಥೆ ಉತ್ತಮ ಶಿಕ್ಷಣ ನೀಡುತ್ತಿದೆ: ಹಣಮಂತ ನಿರಾಣಿ



**ಮಹಾಲಿಂಗಪುರ :** ಕೆ.ಎಲ್.ಇ. ಸಂಸ್ಥೆಯು ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ನೀಡುತ್ತಿದೆ. ಸಾಕಷ್ಟು ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಟ್ಟಿದೆ. ವಿದ್ಯಾರ್ಥಿಗಳು ಸ್ವಾಮಿ ವಿವೇಕಾನಂದ ಹಾಗೂ ಸರ್ ಎಂ. ವಿಶ್ವೇಶ್ವರಯ್ಯನವರಂತೆ ಆಗಬೇಕು. ಕಲಿಕೆಗೆ ಪೂರಕ ವಾತಾವರಣವನ್ನು ಮಹಾವಿದ್ಯಾಲಯ ನೀಡುತ್ತಿದೆ. ವಿದ್ಯಾರ್ಥಿಗಳು ವಿದ್ಯಾರ್ಥಿ ಜೀವನವನ್ನು ಸದುಪಯೋಗ ಪಡಿಸಿಕೊಳ್ಳಬೇಕು. ಅಂಕಗಳ ಜೊತೆಗೆ ಬದುಕಿನಲ್ಲಿ ಸಂಸ್ಕಾರ ಹಾಗೂ ಮೌಲ್ಯಗಳು ಬಹಳ ಮುಖ್ಯ ಎಂದು ವಿಧಾನ ಪರಿಷತ್ ಸದಸ್ಯ ಹಣಮಂತ ನಿರಾಣಿ ಹೇಳಿದರು.

ಪಟ್ಟಣದ ಕೆ.ಎಲ್.ಇ. ಸಂಸ್ಥೆಯ ಎಸ್.ಸಿ.ಪಿ. ಕಲಾ, ವಿಜ್ಞಾನ ಹಾಗೂ ಡಿ.ಡಿ. ಎಸ್. ವಾಣಿಜ್ಯ ಮಹಾ ವಿದ್ಯಾಲಯದಲ್ಲಿ ಜರುಗಿದ 2025 ನೇ ಸಾಲಿನ ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಸ್ವಯಂ ಉದ್ಯೋಗವನ್ನು ಮಾಡುವಂತಿರಬೇಕು. ಹೊಸತನವನ್ನು ರೂಢಿಸಿಕೊಳ್ಳಬೇಕು. ಶಿಕ್ಷಕರಿಗೆ ಗೌರವ ನೀಡುವುದನ್ನು ಕಲಿಯಬೇಕು. ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಬೇಕು. ವಿದ್ಯಾರ್ಥಿಗಳು ಮಾನಸಿಕವಾಗಿ ಸಿದ್ಧವಾಗಿರಬೇಕು. ಯೋಗ, ಧ್ಯಾನವನ್ನು ಮಾಡಬೇಕು. ಈ ವರ್ಷದಶೈಕ್ಷಣಿಕಕಾರ್ಯಗಳುಸರಾಗವಾಗಿ ನಡೆಯಲಿ ಎಂದು ಶುಭ ಹಾರೈಸಿದರು.

ಹುನ್ನೂರಿನ ಜಿ.ಎಫ್.ಜಿ.ಸಿ. ಪ್ರಾಚಾರ್ಯ ಡಾ. ಕಾಳಿಂಗ ಡಿ. ಗೋಳಸಂಗಿ ಮಾತನಾಡಿ ನಾವೆಲ್ಲರೂ ಕೃಷಿಕ ಸಮಾಜದಿಂದ ಬಂದಿದ್ದೇವೆ.

ಜಾನಪದವನ್ನು ಬಿಟ್ಟು ನಾವಿಲ್ಲ. ಜನಪದ ಸಂಸ್ಕೃತಿಯನ್ನು ನಾವೆಲ್ಲ ಮೈಗೂಡಿಸಿಕೊಂಡಿದ್ದೇವೆ. ಮೌಲ್ಯಗಳಿಲ್ಲದ ಬದುಕು ಬದುಕಲ್ಲ. ಹಾಗಾಗಿ ವಿದ್ಯಾರ್ಥಿಗಳು ಪ್ರೀತಿ,ಸ್ನೇಹ,ವಿದ್ಯೆ,ಜೀವನ,ಹಾಗೂಸಂಸ್ಕಾರ ಎಂಬ ಮೌಲ್ಯಗಳನ್ನು ಹೊಂದಬೇಕು. ಅಧ್ಯಯನಶೀಲತೆ ಜೀವನದಲ್ಲಿ ಬಹಳ ಮುಖ್ಯ. ವಿದ್ಯಾರ್ಥಿಗಳ ಬದುಕು ಬಿಚ್ಚಿಡುವಂತಿರಬೇಕು; ಕಟ್ಟಿಡುವಂತಿ–ರಬಾರದು. ವಿದ್ಯಾರ್ಥಿಗಳು ನಿರುದ್ಯೋಗಿ ಯಾಗಿರಬಾರದು ಎಂದು ಕಿವಿ ಮಾತು ಹೇಳಿದರು.

ಪದವಿ ಪ್ರಾಚಾರ್ಯ ಡಾ. ಕೆ. ಎಂ. ಅವರಾದಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ನಮ್ಮ ಮಹಾ ವಿದ್ಯಾಲಯದ ಬಿ. ಎ., ಬಿ.ಕಾಂ., ಬಿ.ಎಸ್.ಸಿ. ಹಾಗೂ ಬಿ.ಸಿ.ಎ. ವಿಭಾಗದಲ್ಲಿ ಉತ್ಕೃಷ್ಟ ಫಲಿತಾಂಶ ಬರುತ್ತಿದೆ. ನಮ್ಮ ವಿದ್ಯಾಲಯದ ವಿದ್ಯಾರ್ಥಿಗಳು ಎಂಟು ಸಲ ವಿಶ್ವವಿದ್ಯಾಲಯ ರಾಂಕ್ ಪಡೆದಿದ್ದಾರೆ. ನೂರಾರು ವಿದ್ಯಾರ್ಥಿಗಳು ಕ್ರೀಡಾ ವಿಭಾಗದಲ್ಲಿ ಯುನಿವ್ವರ್ಸಿಟಿ ಬ್ಲೂ, ಸಾಂಸ್ಕೃತಿಕ ರಂಗಗಳಲ್ಲಿ ರಾಷ್ಟ್ರಮಟ್ಟದ ಚಾಂಪಿಯನ್ ಹಾಗೂ ನ್ಯಾಯಾಂಗ, ಕಾರ್ಯಾಂಗ, ಶಿಕ್ಷಣ ಕ್ಷೇತ್ರ ಹೀಗೆ ಸಾಕಷ್ಟು ಕ್ಷೇತ್ರಗಳಲ್ಲಿ ವಿವಿಧ ಹುದ್ದೆಗಳಲ್ಲಿದ್ದಾರೆ ಎಂದರು.

ವಿದ್ಯಾರ್ಥಿಗಳು ಸಂಸತ್ತು ರಚನೆ ಹಾಗೂ ಪ್ರಮಾಣ ವಚನ ಸ್ವೀಕರಿಸಿದರು. ಕಾರ್ಯಕ್ರಮದಲ್ಲಿ ಸ್ಥಳೀಯ ಆಡಳಿತ ಮಂಡಳಿ ಸದಸ್ಯರಾದ ಅಶೋಕ ಅಂಗಡಿ, ಸಂತೋಷ ಹುದ್ದಾರ, ಐ.ಕ್ಯೂ.ಎ.ಸಿ. ಸಂಯೋಜಕರಾದ ಡಾ. ಸುನಂದಾ ಸೋರಗಾಂವಿ, ಸಿಬ್ಬಂದಿ ಕಾರ್ಯದರ್ಶಿ ಶ್ರೀಮತಿ ಜೆ. ಆರ್. ಪಾಟೀಲ, ವಿದ್ಯಾರ್ಥಿ ಕಾರ್ಯದರ್ಶಿಯಾದ ಕುಮಾರಿ. ಚಂದ್ರಿಕಾ ಇಟ್ನಾಳ,ಕಾಲೇಜಿನ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ಎಸ್. ಎ. ಪಾಟೀಲ ಸ್ವಾಗತಿಸಿದರು. ಸಿ. ಎಂ. ಐಗಳಿ ಪುಷ್ಪಾರ್ಪಣೆ ನೆರವೇರಿಸಿದರು. ಐ. ಸಿ. ಶಿರೋಳ ಸೊಗಸಾಗಿ ನಿರೂಪಿಸಿದರು. ಪಿ. ಎಸ್. ಹಿಪ್ಪರಗಿ ವಂದಿಸಿದರು.

## ಮಳೆನೀರು ಕೊಯ್ಲು, ಘನತ್ಯಾಜ್ಯ ನಿರ್ವಹಣೆ ಹಾಗೂ ಸೌರಶಕ್ತಿ ಬಳಕೆಯಲ್ಲಿ ಹೆಚ್ಚು ಜಾಗೃತರಾಗಬೇಕು
## ಸ್ವಚ್ಚ ನಿರ್ಮಲ ಗ್ರಾಮ ನಿರ್ಮಿಸುವಲ್ಲಿ ಮಹಿಳೆಯರ ಪಾತ್ರ
## ಪ್ರಮುಖವಾಗಿದ್ದು ನವೀಕರಿಸಬಹುದಾದ ಇಂಧನ ಕುರಿತು ಕಾರ್ಯಾಗಾರ



**ಮುದ್ದೇಬಿಹಾಳ :** ಸ್ವಚ್ಛ ನಿರ್ಮಲ ಗ್ರಾಮ ನಿರ್ಮಿಸುವಲ್ಲಿ ಮಹಿಳೆಯರ ಪಾತ್ರ ಪ್ರಮುಖವಾಗಿದ್ದು, ಮಳೆನೀರು ಕೊಯ್ಲು, ಘನತ್ಯಾಜ್ಯ ನಿರ್ವಹಣೆ ಹಾಗೂ ಸೌರಶಕ್ತಿ ಬಳಕೆಯಲ್ಲಿ ಹೆಚ್ಚು ಜಾಗೃತರಾಗಬೇಕು ಎಂದು ಶ್ರೀ ನಂದಿ ಗ್ರಾಮೀಣ ಮತ್ತು ನಗರ ಅಭಿವೃದ್ಧಿ ವಿವಿದ್ದೋಶಗಳ ಸೇವಾ ಸಂಸ್ಥೆ ಅಧ್ಯಕ್ಷ ವೀರಣ್ಣ ಕರಿಗೊಳ ತಿಳಿಸಿದರು.

ತಾಲೂಕಿನ ಕವಡಿಮಟ್ಟಿ ಗ್ರಾಮದಲ್ಲಿ ಗ್ರಾಮ ಪಂಚಾಯತ, ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ ಹಾಗೂ ಶ್ರೀ ನಂದಿ ಗ್ರಾಮೀಣ ಮತ್ತು ನಗರ ಅಭಿವೃದ್ಧಿ ವಿವಿದ್ದೋಶಗಳ ಸೇವಾ ಸಂಸ್ಥೆ ಸಹಯೋಗದಲ್ಲಿ ನಡೆದ ಪ್ರತಿನಿಧಿಗಳು ಹಾಗೂ ಸ್ವ–ಸಹಾಯ ಸಂಘಗಳ ಮಹಿಳೆಯರಿಗೆ ನವೀಕರಿಸಬಹುದಾದ ಇಂಧನ,ಮಳೆ ನೀರು ಕೊಯ್ಲು ಹಾಗೂ ಘನ ತ್ಯಾಜ್ಯ ನಿರ್ವಹಣೆ ಕುರಿತು ಒಂದು ದಿನದ ಮುಖಾಮುಖಿ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದ,ಇಂದಿನ ದಿನಗಳಲ್ಲಿ ಕಸ ವಿಂಗಡಣೆ ಮಾಡುವುದೆ ಒಂದು ಪರಿಣಾಮಕಾರಿಯಾಗಿದೆ. ಘನ ತ್ಯಾಜ್ಯ ನಿರ್ವಹಣೆ ಮಾಡುವಲ್ಲಿ ಕ್ರಮಬದ್ಧ ಅನುಸರಿಸಿದರೆ ಗ್ರಾಮಗಳು ಸ್ವಚ್ಛವಾಗಲಿವೆ. ಆದ್ದರಿಂದ ಪ್ರತಿ ಮಹಿಳೆಯರಿಗೂ ತರಬೇತಿ ಅಗತ್ಯವಿದ್ದು, ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು.

ಇಂಧನ ನಿಯಮಿತ ಬಳಕೆ, ಉಳಿಕೆ ಹಾಗೂ ಮಳೆ ನೀರು ಕೊಯ್ಲಿನ ಮಹತ್ವ ಮತ್ತು ಘನ ತ್ಯಾಜ್ಯ ನಿರ್ವಹಣೆ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಬಸವನಗೌಡ ಬೇವೂರ, ಚಂದ್ರಶೇಖರ ಕಲಾಲ ತರಬೇತಿ ನೀಡಿದರು.

ಕವಡಿಮಟ್ಟಿ ಗ್ರಾಮ ಪಂಚಾಯತಿ ಅಧ್ಯಕ್ಷೆ ಶಕುಂತಲಾ ಹಂಡ್ರಗಲ್ ಅಧ್ಯಕ್ಷತೆ ವಹಿಸಿದ್ದರು. ಸದಸ್ಯರಾದ ಮಲ್ಲಿಕಾರ್ಜುನ ಹಿರೇಮಠ, ಸಿದ್ದಮ್ಮ ಭೀ. ಬಳಬಟ್ಟಿ, ತಾಲೂಕು ಐಇಸಿ ಸಂಯೋಜಕ ಪರಮೇಶ ಹೊಸಮನಿ, ಕಾರ್ಯದರ್ಶಿ ಅಶೋಕ ಕೊರವರ,ಶಿವಲೀಲಾ ಕವಡಿಮಟ್ಟಿ, ಸೇ–ರಿದಂತೆ ಉಪಸ್ಥಿತರಿದ್ದರು.

## ಥ್ರೋಬಾಲ್, ಪಿಎಂ ಶ್ರೀ ಶಾಸಕರ ಮಾದರಿ ಶಾಲೆ ವಿದ್ಯಾರ್ಥಿಗಳು ತಾಲೂಕು ಮಟ್ಟಕ್ಕೆ ಆಯ್ಕೆ



**ಮೂಡಲಗಿ :** ಗುರ್ಲಾಪೂರದ ಪಿಎಂ ಶ್ರೀ ಶಾಸಕರ ಮಾದರಿ ಶಾಲೆ ವಿದ್ಯಾರ್ಥಿಗಳ ಪುರುಷ ಮತ್ತು ಮಹಿಳಾ ಥ್ರೋಬಾಲ್ ತಂಡವು ವಲಯ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿ ವಿಜೇತರಾಗಿ ತಾಲೂಕು ಮಟ್ಟಕ್ಕೆ ಆಯ್ಕೆ ಆಗಿದ್ದಾರೆ. ಆಯ್ಕೆಯಾದ ವಿದ್ಯಾರ್ಥಿಗಳಿಗೆ ಶಾಲಾ ದೈಹಿಕ ಶಿಕ್ಷಕ ಲಕ್ಷ್ಮಯ್ಯಾ ಸಾಲಿಮಠ ಹಾಗೂ ತಂಡದ ತರಬೇತುದಾರರಾದ ಕವಿತಾ ಕಟಗಿ ಹಾಗೂ ಬಿ ವಾಯ್ ಮೋಮಿನ ಮತ್ತು ಶಾಲಾ ಎಸ್ಡಿಎಂಸಿ ಅಧ್ಯಕ್ಷ ಎಲ್ ಪಿ ನೇಮಗೌಡ್ರ, ಮುಖ್ಯೋಪಾಧ್ಯಾಯ ಗೋಪಾಲ ಪತ್ತಾರ ಶಿಕ್ಷಕ ಬಸವರಾಜ ಸಸಾಲಟ್ಟಿ ಹಾಗೂ ಶಾಲಾ ಸಿಬ್ಬಂದಿ ವರ್ಗದವರು ಅಭಿನಂದನೆ ಸಲ್ಲಿಸಿದ್ದಾರೆ.

## ಕಳೆದುಕೊಂಡ ವ್ಯಕ್ತಿಯ ಹಣ ಬೆಳೆಬಾಳುವ ಮಹಿಳೆಯ ಮೊಬೈಲ್ ಮರಳಿಸಿ ಮಾನವೀಯತೆ ಮೆರೆದ ಬನಹಟ್ಟಿ ನಗರದ ಆಟೋ ಚಾಲಕರು





**ರಬಕವಿ–ಬನಹಟ್ಟಿ :** ಯಾರದೋ ದುಡ್ಡು ಎಲ್ಲಮ್ಮನ ಜಾತ್ರೆ ಅನ್ನುವಂತಗಾದೆಮಾತಲ್ಲಿನಡೆಯುತ್ತಿರುವಈಗಿನಕಾಲದಲ್ಲಿ ದುಡ್ಡು ಹಣ ಸಿಕ್ಕರೆ ಸಾಕು ಅನ್ನುವಂತ ಪರಿಸ್ಥಿತಿಯಲ್ಲಿ ,ಇಂತಹ ಕಾಲದಲ್ಲಿ ತನ್ನ ಜೇಬಿನಲ್ಲಿ ಇರುವಂತಹ ಹಣವನ್ನು ಕಳೆದುಕೊಂಡ ಗೊಡಚಿ ಗ್ರಾಮದ ವ್ಯಕ್ತಿ ಮಂಜುನಾಥ ಬನಹಟ್ಟಿ ನಗರದ ಬಸ್ ನಿಲ್ದಾಣದ ಹತ್ತಿರ ಕಳೆದುಕೊಂಡ ಹಣವನ್ನು ಹುಡುಕಾಟದಲ್ಲಿ ಪರದಾಡುತ್ತಿದ್ದಾಗ ವ್ಯಕ್ತಿಯನ್ನು ಕಂಡ ಬನಹಟ್ಟಿನಗರದ ಶ್ರೀ ಕಾಡಸಿದ್ದೇಶ್ವರ ಆಟೋ ಚಾಲಕರು 6,000 ಹಣ ಹಾಗೂ ಇನ್ನೊಬ್ಬ ಮಹಿಳೆಯ 15000 ಬೆಲೆಬಾಳುವ ಮೊಬೈಲ್ ಮರುಳಿಸಿ ಮಾನವೀಯತೆ ಮೆರೆದಿದ್ದಾರೆ. ಈ ಸಂದರ್ಭದಲ್ಲಿ ಸದ್ದಾಂ ನದಾಫ್ ಮುಸಾ ಮುಧೋಳ್, ಸುಭಾಷ್ ಪಾರತನಹಳ್ಳಿ, ಆಸಿಫ್ ಅತ್ತಾರ್ , ರಾವ್ ಸಾಬ್ ಸಿಂದೆ, ರಾಜು ಎಂಟಗೌಡರ್ , ಮೌಲಾ ಅತ್ತಾರ್ , ಫಿರೋಜ್ ಗುರ್ಲ್ ಹೊಸೂರ , ಮುಸ್ತಾಕ್ ಪೆಂಡಾರಿ, ಇನ್ನು ಅನೇಕರು ಉಪಸ್ಥಿತರಿದ್ದರು.

# ಮಳೆಯಾದರೆ ಕೆಸರು ಗದ್ದೆಯಾಗುವ ಗಾಂಧಿ ಕ್ರೀಡಾಂಗಣ
## ಕ್ರೀಡಾಪಟುಗಳು ಮತ್ತು ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ತೊಂದರೆ

**ವರದಿ: ಚಂದ್ರಶೇಖರ ಮೋರೆ**

**ಮಹಾಲಿಂಗಪುರ:** ಪಟ್ಟಣದ ಕ್ರೀಡಾಪಟುಗಳಿಗೆ ಇರುವ ಏಕೈಕ ಸಾರ್ವಜನಿಕ ಆಟದ ಮೈದಾನವಾದ ಗೋಕಾಕ ರಸ್ತೆಯಲ್ಲಿರುವ ಸರ್ಕಾರಿ ಪ್ರೌಢ ಮತ್ತು ಪದವಿ ಪೂರ್ವ ಕಾಲೇಜು ಆವರಣದಲ್ಲಿರುವ ಗಾಂಧಿ ಕ್ರೀಡಾಂಗಣವಾಗಿದೆ. ವರ್ಷದ ನಾಲ್ಕೈದು ತಿಂಗಳು ಮಳೆಗಾಲದಲ್ಲಿ ಆಟದ ಮೈದಾನ ಇದ್ದೂ ಇಲ್ಲದಂತಾಗಿದೆ. ಮುಖ್ಯವಾಗಿ ಅಲ್ಪ ಮಳೆಯಾದರೂ ಸಹ, ಆಟದ ಮೈದಾನವು ಸಂಪೂರ್ಣ ಕೆಸರುಗದ್ದೆ ಯಂತಾಗುವುದ–ರಿಂದ ಆಟವಾಡಲು, ಕನಿಷ್ಠ ಮೈದಾನದಲ್ಲಿ ನಡೆದಾಡಲೂ ಸಹ ಬರದಂತಹ ಸ್ಥಿತಿ ನಿರ್ಮಾಣವಾಗುತ್ತಿದೆ.

**ಕನಸು ನನಸಾಗಿಸಿದ್ದ ಉಮಾಶ್ರೀ :**

ಪಟ್ಟಣದ ಕ್ರೀಡಾಪಟುಗಳು,ಕ್ರೀಡಾಭಿಮಾನಿಗಳ ದಶಕಗಳ ಕನಸು 2017 ರಲ್ಲಿ ಅಂದಿನ ಸಚಿವೆ ಶ್ರೀಮತಿ ಡಾ. ಉಮಾಶ್ರೀ ಅವರು ಕ್ರೀಡಾಂಗಣ ಅಭಿವೃದ್ಧಿಗಾಗಿ ಐದು ಲಕ್ಷ ರೂ.ಗಳ ಅನುದಾನ ನೀಡಿ, ಗರಸು ಹಾಕಿಸಿ, ವಿದ್ಯುತ್ ಸೌಲಭ್ಯದೊಂದಿಗೆ ಸುಂದರವಾದ ಕ್ರೀಡಾಂಗಣ ನಿರ್ಮಿಸಿ, ಮಹಾತ್ಮಾ ಗಾಂಧಿ–ಜಿಯವರ ನಾಮಕರಣ ಮಾಡಿ ಕ್ರೀಡಾಂಗಣ ಉದ್ಘಾಟಿಸಿದ್ದರು. ಕ್ರೀಡಾಭಿಮಾನಿಗಳ ದಶಕಗಳ ಕನಸನ್ನು ಸಾಕಾರಗೊಳಿಸಿದ್ದರು.

**ಸಂಕೀರ್ಣ ಕ್ರೀಡಾಂಗಣ :**

ಮುಖ್ಯವಾಗಿ ಈ ಕ್ರೀಡಾಂಗಣದ ಆವರಣದಲ್ಲಿ







ಸರ್ಕಾರಿ ಪ್ರೌಢಶಾಲೆ, ಸರ್ಕಾರಿ ಪದವಿ ಪೂರ್ವ ಕಾಲೇಜು, ಕೌಜಲಗಿ ನಿಂಗಮ್ಮ ಸಾಂಸ್ಕೃತಿಕ ಭವನ, ಮೆಟ್ರಿಕ್ ಪೂರ್ವ ಬಿಸಿಎಂ ಹಾಸ್ಟೆಲ್ ಮತ್ತು ಮಹಾಲಿಂಗೇಶ್ವರ ಜಾತ್ರೆಯ ಕುಸ್ತಿ ಮೈದಾನ ಸೇರಿದಂತೆ ಎಲ್ಲವುಗಳು ಒಂದೇ ಆವರಣದಲ್ಲಿ ಇರುವ ಕಾರಣ ಗಾಂಧಿ ಕ್ರೀಡಾಂಗಣವು ಸಂಕೀರ್ಣ ಕ್ರೀಡಾಂಗಣ ಎಂದರೆ ತಪ್ಪಾಗಲಾರದು.

**ಕ್ರೀಡಾಪಟುಗಳಿಗೆ ಸಹಕಾರಿ :** ಕಳೆದ ಎಂಟು ವರ್ಷಗಳಿಂದಇದೇಕ್ರೀಡಾಂಗಣದಲ್ಲಿಪಟ್ಟಣದ ಸಾರ್ವಜನಿಕರು ಮುಂಜಾನೆ, ಸಂಜೆಗೆ ವಾಯು ವಿಹಾರ, ಕ್ರಿಕೆಟ್, ವ್ಹಾಲಿಬಾಲ್, ಕಬ್ಬಡ್ಡಿ, ಕ್ರಿಕೆಟ್ ಪಂದ್ಯಾವಳಿ ನಡೆಸಲು ಸೇರಿದಂತೆ ಹಲವು ಕ್ರೀಡೆಗಳ ಅಭ್ಯಾಸಕ್ಕೆ ಉಪಯೋಗವಾಗುತ್ತಿದೆ.

**ಪ್ರತಿ ಮಳೆಗಾಲದಲ್ಲಿ ತೊಂದರೆ :**

ಮುಖ್ಯವಾಗಿ ಕ್ರೀಡಾಂಗಣದ ಈ ಪ್ರದೇಶವು ಮೊದಲು ಸವಳು ಜವಳು ಹಾಗೂ ಬುದ್ನಿ ಪಿ.ಡಿ.ಯ ಸ್ಮಶಾನವಾಗಿತ್ತು. ಕ್ರೀಡಾಂಗಣದ ಪಶ್ಚಿಮ ಭಾಗದಲ್ಲಿ ಸೂಕ್ತ ಚರಂಡಿ ವ್ಯವಸ್ಥೆ ಇಲ್ಲದ ಕಾರಣ ಮಳೆ ನೀರು ಹೊರಗೆ ಹೋಗದೇ ಅಲ್ಪ ಮಳೆಗೆ ಕ್ರೀಡಾಂಗಣವು ಸಂಪೂರ್ಣ ಕೆಸರುಗದ್ದೆಯಂತಾಗಿ ವರ್ಷದ 4–5 ತಿಂಗಳು ಕ್ರೀಡಾಪಟುಗಳಿಗೆ ಮೈದಾನವಿದ್ದೂ ಇಲ್ಲದಂತಾಗಿದೆ.

**ಸವಳು ಜವಳು ಪೈಪ್ಲೈನ್ ದುರಸ್ಥಿ ಇಲ್ಲ :**

ಕ್ರೀಡಾಂಗಣ ಉದ್ಘಾಟನೆ ನಂತರ ಪುರಸಭೆ ವತಿಯಿಂದ 2017–18 ರಲ್ಲಿ ಸುಮಾರು 3–4 ಲಕ್ಷ ರೂ. ವೆಚ್ಚದಲ್ಲಿ ಸವಳು ಜವಳು ಪೈಪ್ಲೈನ್ ಅಳವಡಿಸಲಾಗಿದೆ. ಪೈಪ್ಲೈನ್ ಅಳವಡಿಸದ ಆರಂಭದಲ್ಲಿ ಕೆಲವು ವರ್ಷ ಮೈದಾನ ಕೆಸರುಗದ್ದೆಯಾಗಿರಲಿಲ್ಲ. ನಂತರ ಪೈಪ್ಲೈನ್ ದುರಸ್ಥಿ ಇಲ್ಲದ ಕಾರಣ ಸವಳು ಜವಳು ಪೈಪ್ಲೈನ್ ನೀರು ಹೊರಗೆ ಹೋಗದೆ ಮತ್ತೆ ಕೆಸರುಗದ್ದೆಯಾಗುತ್ತಿದೆ ಎನ್ನಲಾಗಿದೆ.

**ಮುಖ್ಯ ಶಿಕ್ಷಕರಿಂದಲೂ ಮನವಿ :**

ಮಳೆಯಿಂದ ಕ್ರೀಡಾಂಗಣ ಕೆಸರುಗದ್ದೆಯಾಗಿ ಮಕ್ಕಳಿಗೆ ಆಟವಾಡಲು, ಸಂಚರಿಸಲು ತೊಂದರೆಯಾಗುತ್ತಿದೆ. ದುರಸ್ತಿಗೊಳಿಸಿ ಎಂದು ಹಲವು ಬಾರಿ ಪುರಸಭೆಗೆ ಮನವಿ ಸಲ್ಲಿಸಿದ್ದೇವೆ. ನಮ್ಮ ಶಿಕ್ಷಣ ಇಲಾಖೆ ಅಧಿಕಾ–ರಿಗಳ ಗಮನಕ್ಕೂ ತರಲಾಗಿದೆ ಎಂದು ಸರ್ಕಾರಿ ಪ್ರೌಢ ಶಾಲೆಯ ಮುಖ್ಯ ಶಿಕ್ಷಕ ಧನಂಜಯ ಕುಲಕರ್ಣಿ ತಿಳಿಸಿದ್ದಾರೆ.

**ಶಾಶ್ವತ ಪರಿಹಾರಕ್ಕೆ ಒತ್ತಾಯ :**

ಸಂಕೀರ್ಣ ಕ್ರೀಡಾಂಗಣ ಸಂಪೂರ್ಣ ಅವ್ಯವಸ್ಥೆಯ ಆಗರವಾಗಿದೆ. ಕ್ರೀಡಾಂಗಣ ಒಳ ಪ್ರವೇಶಕ್ಕೆ ಎರಡು ಕಿರಿದಾದ ರಸ್ತೆಗಳಿವೆ. ಮೈದಾನಕ್ಕೆ ಕಂಪೌಂಡ ಮತ್ತು ಸೂಕ್ತ ಗೇಟ್ ಇಲ್ಲದ್ದರಿಂದ ಸಂಜೆಯಾಗುತ್ತಿದ್ದಂತೆಯೆ ಕುಡುಕರು, ಕಳ್ಳರು, ಪುಂಡ ಪೋಕ–ರಿಗಳ ಹಾವಳಿ ಹೆಚ್ಚಾಗಿದೆ. ಜೊತೆಗೆ ರಾತ್ರಿ ವೇಳೆ ಸಾರ್ವಜನಿಕರು ಬಯಲು ಶೌಚಕ್ಕೂ ಉಪಯೋಗಿಸುತ್ತಿದ್ದಾರೆ. ಮುಖ್ಯವಾಗಿ ಖಾಸಗಿ ವ್ಯಕ್ತಿಗಳು ತಮ್ಮ ವಾಹನಗಳನ್ನು ನಿಲುಗಡೆ ಮಾಡುತ್ತಿರುವ ಕಾರಣ ಮೈದಾನವು ಮತ್ತಷ್ಟು ಕೆಸರಿನ ಗದ್ದೆಯಾಗುತ್ತಿದೆ. ಇದರಿಂದಾಗಿ ಮಳೆಗಾಲದ 4–5 ತಿಂಗಳು ಆಟಗಾರರಿಗೆ ಬಹಳ ತೊಂದರೆಯ ಜೊತೆಗೆ ವಿದ್ಯಾರ್ಥಿಗಳಿಗೆ ನಡೆದಾಡಲೂ ಸಹ ಆಗುತ್ತಿಲ್ಲ. ಮುಖ್ಯವಾಗಿ ಶಾಲಾ ಮಕ್ಕಳು ನಿತ್ಯ ಪೆಗ್ಬಾರ್ ಅಂಗಡಿ ಮುಂದೆ ಶಾಲೆಗೆ ಬಂದು ಹೋಗುವಂತಾಗಿದೆ. ಪುರಸಭೆ ಅಧಿಕಾರಿಗಳು, ಶಾಸಕರು, ಶಿಕ್ಷಣ ಇಲಾಖೆ, ಕ್ರೀಡಾ ಇಲಾಖೆ ಸೇರಿದಂತೆ ಜಿಲ್ಲಾಡಳಿತವು ಇದಕ್ಕೆ ಒಂದು ಶಾಶ್ವತ ಪರಿಹಾರ ಒದಗಿಸಬೇಕೆಂದು ಕ್ರಿಕೆಟ್ ಆಟಗಾರ ಮಹಾದೇವ ಕಡಬಲ್ಲವರ, ರಾಜು ಶೆಟ್ಟರ್, ಶಿವಶಂಕರ ಗುಜ್ಜರ, ಮಲ್ಲು ಪಾಚ್ಛಾಪೂರ, ಪರಶುರಾಮ ಪಾತ್ರೋಟ, ಯಾಸೀನ ಪಾಂಡು, ಬಲರಾಮ ಉಸಳಿ, ಮಹೇಶ ಶಿಂಧೆ ಸೇರಿದಂತೆ ಇನ್ನೂ ಹಲವರು ಒತ್ತಾಯಿಸಿದ್ದಾರೆ.

### ಶೀಘ್ರ ದುರಸ್ಥಿಗೆ ಕ್ರಮ

**ಪುರಸಭೆಯ ಮುಖ್ಯಾಧಿಕಾರಿಯಾಗಿ ಕಳೆದ ತಿಂಗಳಷ್ಟೇಆಗಮಿಸಿದ್ದೇನೆ.ಗಾಂಧಿಕ್ರೀಡಾಂಗಣದ ಮಾಹಿತಿಯು ನಮ್ಮ ಅಭಿಯಂತರ ವಿಭಾಗಕ್ಕೆ ಸಂಬಂಧಿಸಿದೆ. ಪುರಸಭೆಯ ಅಭಿಯಂತರ ವಿಭಾಗಕ್ಕೆ 2–3 ದಿನಗಳಲ್ಲಿ ನೂತನ ಕಿರಿಯ ಅಭಿಯಂತರರು ಕರ್ತವ್ಯಕ್ಕೆ ಹಾಜರಾಗಲಿದ್ದಾರೆ. ಅಭಿಯಂತರರು ಕರ್ತವ್ಯಕ್ಕೆ ಹಾಜರಾದ ನಂತರ ಕ್ರೀಡಾಂಗಣದ ಬಗ್ಗೆ ಸಂಪೂರ್ಣ ಮಾಹಿತಿ ಪಡೆದುಕೊಂಡು, ದುರಸ್ಥಿಗೆ ಬೇಕಾದ ಅಗತ್ಯ ಕ್ರಮಗಳನ್ನು ಪುರಸಭೆಯಿಂದ ಕೈಗೊಳ್ಳುತ್ತೇವೆ.**

**। ಎಸ್. ಎ. ಲಮಾಣಿ.**
**ಮುಖ್ಯಾಧಿಕಾರಿಗಳು ಪುರಸಭೆ.**

# ಬಿಸಿಎಂ ವಸತಿ ನಿಲಯಕ್ಕೆ ಭೇಟಿ ನೀಡಿದ ಅಧಿಕಾರಿಗಳು



**ನಾಲತವಾಡ :** ಸ್ಥಳಿಯ ಬಿಸಿಎಂ ವಸತಿ ನಿಲಯಕ್ಕೆ ಉಪತಹಶೀಲ್ದಾರ ಎನ್.ಬಿ.ದೊರೆ ಹಾಗೂ ಕಂದಾಯ ನಿರೀಕ್ಷ ವಿ.ವಿ.ಅಂಬಿಗೇರ ಭೇಟಿ ನೀಡಿ ನಿಲಯದ ವ್ಯವಸ್ಥೆ ಪರಿಶೀಲನೆ ನಡೆಸಿದ್ದಾರೆ. ದಿಢೀರ್ ಭೇಟಿ ನೀಡಿದ ಅಧಿಕಾರಿಗಳು ಮಕ್ಕಳೊಂದಿಗೆ ವಿತರಣೆ ಮಾಡುವ ಕಿಟ್ ಮಾಹಿತಿ, ತಿಂಡಿ ಊಟ ಸ್ವಚ್ಚತೆ ಕುರಿತು ಮಾಹಿತಿ ಪಡೆದುಕೊಂಡರು.

ಈ ವೇಳೆ ಸ್ಥಳದಲ್ಲಿದ್ದ ಮುಖ್ಯ ಅಡುಗೆಯವರೊಂದಿಗೆ ಚರ್ಚಿಸಿದ ಅವರು ನಿಲಯದ ಮಕ್ಕಳ ಸುರಕ್ಷತೆ, ಮೇನು ಪಾಲನೆ ಮಾಡಿ ಊಟ ತಿಂಡಿ ಒದಗಿಸಬೇಕು, ಮಕ್ಕಳನ್ನು ಯಾವದೇ ಕಾರಣಕ್ಕೂ ನಿಲಯದಿಂದ ಅನಧಿಕೃತ ಹೊರ ಬಿಡಕೂಡದು, ಸ್ವಚ್ಚತೆಗೆ ಆದ್ಯತೆ ನೀಡಿ ಎಂದರು. ಬೆಳಿಗ್ಗೆ ಮತ್ತು ಸಂಜೆ ವೇಳೆಯ ನಿಯಮಾನುಸಾರ ಮಕ್ಕಳಿಗೆ ಚಟುವಟಿಕೆಗಳನ್ನು ಪಾಲಿಸಿ ಹಾಗೂ ಸ್ಥಳಿಯ ಸಾರ್ವಜನೀಕರಿಂದ ಯಾವದೇ ದೂರುಗಳು ಬರದಂತೆ ನಿಗಾವಹಿಸಿ ಎಂದು ನಿಲಯದ ಸಿಬ್ಬಂದಿಗಳಿಗೆ ತಿಳಿಸಿದರು.

ಮಕ್ಕಳ ದೂರು: ನಿಲಯದಲ್ಲಿ ನಮಗೆ ಸಿಬ್ಬಂದಿಗಳು ಸ್ಪಂದಿಸುತ್ತಾರೆ ಮತ್ತು ಮೇನು ಅನುಸರಿಸಿ ಗುಣಮಟ್ಟದ ತಿಂಡಿ ಊಟ ನೀಡುತ್ತಾರೆ ಯಾವದೇ ತೊಂದರೆ ಇಲ್ಲ ಆದರೆ ಮಳೆಗಾಲದಲ್ಲಿ ನಡೆದಾಡಲೂ ಬರದಂತ ಸ್ಥಿತಿಯಲ್ಲಿ ಆವರಣದಲ್ಲಿ ಮಳೆ ನೀರು ನುಗ್ಗುತ್ತದೆ ಕೆಸರು ಗದ್ದೆಯಲ್ಲೇ ಅಲೆಯಬೇಕಿದೆ ಮತ್ತು ಚರಂಡಿ ಶುಚಿಗೊಳಿಸಲು ಮುಂದಾಗುತ್ತಿಲ್ಲ ಎಂದು ಮಕ್ಕಳು ಅಧಿಕಾರಿಗಳಿಗೆ ದೂರು ತಿಳಿಸಿದರು. ಸ್ಪಂದಿಸಿದ ಅಧಿಕಾರಿಗಳು ಶೀಘ್ರವೇ ಪ.ಪಂ ಯವರ ಗಮನಕ್ಕೆ ನಿಮ್ಮ ಮನವಿ ರವಾನಿಸಿ ಸ್ವಚ್ಚತೆಗೆ ತಿಳಿಸುತ್ತೇವೆ ಎಂದರು.

ಈ ವೇಳೆ ಮುತ್ತಣ್ಣ ತಳವಾರ, ದಲಿತ ಯುವ ಸಂಘಟಕರಾದ ಗುಂಡಪ್ಪ ಚಲವಾದಿ, ಶರಣಮ್ಮ ಹುಗ್ಗಿ, ಲಕ್ಕಣ್ಣ ಬಿರಾದಾರ ಹಾಗೂ ಶಿವಪ್ಪ ದೊಡಮನಿ ಇದ್ದರು.

# 30.14 ಲಕ್ಷ ಮೌಲ್ಯದ ಚಿನ್ನಾಭರಣ, ನಗದು ಕಳವು

**ಮುದ್ದೇಬಿಹಾಳ :** ಪಟ್ಟಣದ ಹುಡ್ಕೋದ 14 ನೇ ಕ್ರಾಸ್ ನಲ್ಲಿರುವ ಐದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಸಚಿನ ಕೌಶಿಕ್ ಅವರ ಬಾಡಿಗೆ ಇದ್ದ ಮನೆಯಲ್ಲಿ ಕಳ್ಳರು ಭಾನುವಾರ ಹಾಗೂ ಸೋಮವಾರದ ಮಧ್ಯೆ ಕಳ್ಳತನ ಮಾಡಿದ್ದು ಒಟ್ಟು 30.14 ಲಕ್ಷ ಮೊತ್ತದ ಚಿನ್ನ, ಬೆಳ್ಳಿ ಆಭರಣ ಹಾಗೂ ಡೈಮಂಡ್ ಮತ್ತು ನಗದು ಕಳವು ಮಾಡಿದ್ದಾರೆ ಎಂದು ಎಸ್ಪಿ ಲಕ್ಷ್ಮಣ ನಿಂಬರಗಿ ಮಾಹಿತಿ ನೀಡಿದರು.



ಪಟ್ಟಣದ ಹುಡ್ಕೋದಲ್ಲಿರುವ ಜಿಲ್ಲಾ ನ್ಯಾಯಾಧೀಶರ ಮನೆಗೆ ಸೋಮವಾರ ಭೇಟಿ ನೀಡಿದ್ದ ಅವರು ಘಟನೆಯ ಕುರಿತು ನ್ಯಾಯಾಧೀಶರಿಂದ ಮಾಹಿತಿ ಪಡೆದುಕೊಂಡ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.

ಮನೆಯ ಬಾಗಿಲು ಮುರಿಯದೇ ಕೀ ಬಳಸಿ ಬಾಗಿಲು ತೆರೆದಿದ್ದು ಅಂದಾಜು 29.60 ಲಕ್ಷ ಮೌಲ್ಯದ ಚಿನ್ನಾಭರಣ, ಡೈಮಂಡ್ ಆಭರಣ, 4 500 ಮೊತ್ತದ ಬೆಳ್ಳಿ ಗೆಜ್ಜೆ, 50 ಸಾವಿರ ನಗದು ಹಣ ಕಳ್ಳತನ ಮಾಡಿದ್ದಾರೆ ಎಂದು ನ್ಯಾಯಾಧೀಶರು ದೂರು ನೀಡಿದ್ದಾರೆ ಎಂದು ತಿಳಿಸಿದರು.

ಘಟನೆಯ ಕುರಿತು ಸಿಪಿಐ ಮೊಹ್ಮದ ಫಸಿಯುದ್ದೀನ ನೇತೃತ್ವದಲ್ಲಿ ಪಿಎಸ್ಐ ಸಂಜಯ ತಿಪರೆಡ್ಡಿ ಒಳಗೊಂಡ ವಿಶೇಷ ತನಿಖಾ ತಂಡವನ್ನು ರಚಿಸಲಾಗಿದೆ. ಪರಿಚಿತರಿಂದಲೇ ಕಳವು ಆಗಿರುವ ಶಂಕೆ ಇದ್ದು ತನಿಖೆ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಅಪರಾಧ ಪ್ರಕರಣಗಳನ್ನು ತಡೆಗಟ್ಟಲು ಮುದ್ದೇಬಿಹಾಳ ಪಟ್ಟಣದ ಆಯಕಟ್ಟಿನ ಜಾಗೆಯಲ್ಲಿ ಟ್ರಾಫಿಕ್ ಸಿಗ್ನಲ್ ಆರಂಭಿಸಲು ಹಾಗೂ ಅತ್ಯಾಧುನಿಕ ಕ್ಯಾಮೆರಾ ಅಳವಡಿಕೆಗೆ ಸರ್ಕಾರಕ್ಕೆ ಒಂದು ಕೋಟಿ ರೂಪಾಯಿ ಪ್ರಸ್ತಾವನೆಯನ್ನು ಪೊಲೀಸ್ ಇಲಾಖೆಯಿಂದ ಸಲ್ಲಿಸಲಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ತಿಳಿಸಿದರು.

ಈಗಿರುವ ಕ್ಯಾಮೆರಾಗಳಲ್ಲಿ ಹಗಲು ಹೊತ್ತಿನಲ್ಲಿ ವಾಹನಗಳ ನಂಬರ್ ಗುರುತು ಸಿಗುವುದಿಲ್ಲ. ಆದ್ದರಿಂದ ಟ್ರಾಫಿಕ್ ಸಿಗ್ನಲ್, ಜನರ ಮುಖಚರ್ಯೆ ಗುರುತಿಸುವ ಸಿಸಿಟಿವಿ ಕ್ಯಾಮೆರಾ ಅಳವಡಿಕೆ ಮಾಡಲು ಅನುದಾನ ಒದಗಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು ಇಲ್ಲಿನ ಶಾಸಕರು ಶಾಸಕರ ವಿಶೇಷ ನಿಧಿಯಡಿ ಅನುದಾನ ಒದಗಿಸುವುದಾಗಿ ತಿಳಿಸಿದ್ದಾರೆ ಎಂದರು.

ಇಲ್ಲಿನ ಹುಡ್ಕೋದಲ್ಲಿ ಮನೆ ನಿರ್ಮಾಣಕ್ಕೆ 50 ಲಕ್ಷ ವೆಚ್ಚ ಮಾಡಿದ್ದಾರೆ.

ಆದರೆ 10 ಸಾವಿರ ಖರ್ಚು ಮಾಡಿ ಸಿಸಿಟಿವಿ ಹಾಕಿಸಿಕೊಳ್ಳಲು ಸಾರ್ವಜನಿಕರು ಹಿಂದೇಟು ಹಾಕುತ್ತಾರೆ.

ನಾಗರಿಕರು ಪೊಲೀಸರಿಗೆ ಸಹಕಾರ ಮಾಡಬೇಕು. ಇಂತಹ ಘಟನೆಗಳು ನಡೆದಾಗ ಕಳ್ಳರ ಗುರುತು ಪತ್ತೆ ಹಚ್ಚಲು ಸಿಸಿಟಿವಿ ಕ್ಯಾಮೆರಾ ಸಹಕಾರಿಯಾಗುತ್ತದೆ. ಒಬ್ಬರಿಗೆ ಕಷ್ಟವಾದರೆ 10–20 ಮನೆಗಳ ಮಾಲೀಕರು ಸೇರಿಕೊಂಡು ಸಿಸಿಟಿವಿ ಅಳವಡಿಸುವ ಕುರಿತು ಚಿಂತನೆ ನಡೆಸಬೇಕು ಎಂದು ಎಸ್ಪಿ ತಿಳಿಸಿದರು. ಸಿಪಿಐ ಮೊಹ್ಮದ ಫಸಿಯುದ್ದೀನ, ಪಿಎಸ್ಐ ಸಂಜಯ ತಿಪರೆಡ್ಡಿ , ಅಪರಾಧ ವಿಭಾಗದ ಪಿಎಸ್ಐ ಆರ್.ಎಲ್.ಮನ್ನಾಭಾಯ ಇದ್ದರು.

**ಕ್ಯಾಮೆರಾ ಅಳವಡಿಕೆಗೆ ಅನುದಾನ– ಭರವಸೆ**

ಅಪರಾಧ ಚಟುವಟಿಕೆಗಳ ಮೇಲೆ ತೀವ್ರ ನಿಗಾ ವಹಿಸಲು ಸಿಸಿಟಿವಿ ಕ್ಯಾಮೆರಾ ಟ್ರಾಫಿಕ್ ಸಿಗ್ನಲ್ ಅಳವಡಿಸಲು ಶಾಸಕರ ವಿಶೇಷ ಅನುದಾನದಡಿ ಪೊಲೀಸ್ ಇಲಾಖೆಗೆ ಒಂದು

ಕೋಟಿ ರೂ.ಅನುದಾನ ನೀಡುವುದಾಗಿ ಶಾಸಕ ಸಿ.ಎಸ್.ನಾಡಗೌಡ ಭರವಸೆ ನೀಡಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ತಮ್ಮನ್ನು ಭೇಟಿಯಾದ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಜಿಲ್ಲಾ ನ್ಯಾಯಾಧೀಶರ ಮನೆ ಕಳ್ಳತನ ಮಾಡಿದ ಅಪರಾಧಿಗಳನ್ನು ತ್ವರಿತವಾಗಿ ಬಂಧಿಸುವಂತೆ ತಿಳಿಸಿದ್ದಾಗಿ ಶಾಸಕರು ಹೇಳಿದರು.

# ಸರಕಾರಿ ಆಸ್ಪತ್ರೆಯಲ್ಲಿ ರೋಗಿಗಳೋ ರೋಗಿಗಳು!



**ಇಳಕಲ್ :** ಶೀತ ಕೆಮ್ಮು ಜ್ವರ ರೋಗದಿಂದ ಬಳಲುತ್ತಿರುವ ರೋಗಿಗಳು ಸೋಮವಾರದಂದು ಇಲ್ಲಿನ ಸರಕಾರಿ ಆಸ್ಪತ್ರೆಯಲ್ಲಿ ತುಂಬಿಕೊಂಡಿದ್ದರು.

ಆಸ್ಪತ್ರೆಯ ವೈದ್ಯರ

ಕೊಠಡಿಗಳಿಗೆ ಹೋಗಲು ಆಸ್ಪತ್ರೆಯ ವರಾಂಡದ ತುಂಬೆಲ್ಲಾ ರೋಗಿಗಳು ನಿಂತುಕೊಂಡಿದ್ದು ಅವರನ್ನು ಮಾತನಾಡಿಸಿದರೇ ಎಲ್ಲರೂ ನೆಗಡಿ , ಕೆಮ್ಮು ಮತ್ತು ಜ್ವರದಿಂದ ಬಳಲುತ್ತಿರುವದಾಗಿ ಹೇಳಿದರು.

ಆಸ್ಪತ್ರೆಯಲ್ಲಿನ ವೈದ್ಯರು ರೋಗಿಗಳ ತಪಾಸಣೆ ಮಾಡಿ ಅವರಿಗೆ ಅವಶ್ಯವಿರುವ ಔಷಧಗಳನ್ನು ನೀಡಲು ಚೀಟಿಗಳನ್ನು ಬರೆದುಕೊಡುತ್ತಿದ್ದರು.

ಆಸ್ಪತ್ರೆಯ ಔಷಧಿ ಸ್ಟಾಲ್ ನಲ್ಲಿ ಅವಶ್ಯಕ ಔಷಧೀಗಳು ಲಭ್ಯವಿವೆ ಎಂದು ವೈದ್ಯರು ಹೇಳಿದರು.

**ವರದಿ ನಬಿ ಹುಣಚಗಿ**

# ಡಾ. ಮುರ್ತುಜಾ ಒಂಟಿ ಅವರಿಗೆ ಒಪ್ಪತ್ತೇಶ್ವರ ಗುರು ಕಾರುಣ್ಯ ಪ್ರಶಸ್ತಿ

**ಗುಳೇದಗುಡ್ಡ :** ಕರಮುಡಿ ಒಪ್ಪತ್ತೇಶ್ವರ ಸಂಸ್ಥಾನ ಮಠದ ಪೀಠಾಧಿಪತಿಗಳಾದ ಶ್ರೀಮ.ನಿ.ಪ್ರ.ಅಭಿನವಒಪ್ಪತ್ತೇಶ್ವರಶ್ರೀಗಳ ದಿವ್ಯ ಸಾನಿಧ್ಯದಲ್ಲಿ"ಕಲಬುರ್ಗಿಯ ಶ್ರೀ ಶರಣಬಸವೇಶ್ವರ ಪುರಾಣ ಪ್ರವಚನದ ಷಷ್ಠಬ್ದಿ ಪೂರ್ತಿ ಸಮಾರಂಭ, ಶ್ರೀ ಮ.ನಿ.ಪ್ರ. ಅಭಿನವ ಒಪ್ಪತ್ತೇಶ್ವರ ಪೂಜ್ಯರ 50ನೇ ಜನ್ಮ ಸುವರ್ಣ ಮಹೋತ್ಸವ, ಪಟ್ಟಾಧಿಕಾರದ ರಜತ ಮಹೋತ್ಸವ ಹಾಗೂತುಲಾಭಾರ ದ–ಅಂಗವಾಗಿ ರಾಜ್ಯಮಟ್ಟದ ಒಪ್ಪತ್ತೇಶ್ವರ ಗುರು ಕಾರುಣ್ಯ ಪ್ರಶಸ್ತಿ"ಸಮಾರಂಭವು ದಿನಾಂಕ 24 ಅಗಸ್ಟ್ 2025 ಭಾನುವಾರ ಕರಮುಡಿಯಲ್ಲಿ ಅದ್ದೂರಿಯಾಗಿ ಜರುಗಿತು.ಡಾ. ಮುರ್ತುಜಾ ಒಂಟಿ ಅವರ "ರಂಗಸಿ–ರಿ"ಸಂಶೋಧನಾ ಕೃತಿಗೆ"ಒಪ್ಪತ್ತೇಶ್ವರ ಗುರು ಕಾರುಣ್ಯ"ಪ್ರಶಸ್ತಿಯನ್ನು ಪೂಜ್ಯಶ್ರೀ ಒಪ್ಪತ್ತೇಶ್ವರ ಮಹಾಸ್ವಾಮಿಗಳು, ಶ್ರೀ ಷ .ಬ್ರ. ಗುರುಸಿದ್ಧ ಶಿವಾಚಾರ್ಯ ಸ್ವಾಮಿಗಳು, ಶ್ರೀ ಷ.ಬ್ರ. ಕೈಲಾಸನಾಥ ಸ್ವಾಮಿಗಳು ಪ್ರದಾನ ಮಾಡಿದರು.

ಈ ಕಾರ್ಯಕ್ರಮದಲ್ಲಿ ಶ್ರೀ ಎ.ಎಂ ಮಡಿವಾಳರ ವಿಶ್ರಾಂತ ಜಂಟಿ ನಿರ್ದೇಶಕರು,ಡಾ . ನಾಗರಾಜ್ ನಾಡಗೌಡ, ಶ್ರೀ ಮಹದೇವ್ ಬಸರ ಕೋಡ , ಶಿಕ್ಷಕರಾದ ಶ್ರೀಎಚ್ .ಟಿ. ರಂಗಾಪುರ ಹಾಗೂ ಶ್ರೀ ಎಸ್. ಬಿ. ಮೆಣಸಿನಕಾಯಿ ಮೊದಲಾದವರು ಉಪಸ್ಥಿತರಿದ್ದರು.



## ಅನುದಾನದ ಕೊರತೆ ಅಭಿವೃದ್ಧಿ ಕುಂಠಿತ ನೀರಸ ಕಲಾಪ: ಗುಡಗುಂಟಿ

**ಜಮಖಂಡಿ :** ರಾಜ್ಯ ಸರ್ಕಾರದಲ್ಲಿ ಅನುದಾನದ ಕೊರತೆಯುಂಟಾಗಿದೆ. ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿದ್ದು, ಆಡಳಿತ ಪಕ್ಷದ ಶಾಸಕರೇ ಅನುದಾನಕ್ಕೆ ದುಂಬಾಲು ಬೀಳುವ ಪರಿಸ್ಥಿತಿ ಎದುರಾಗಿದೆ ಎಂದು ಶಾಸಕ ಜಗದೀಶ ಗುಡಗುಂಟಿ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರ ಪಂಚ ಗ್ಯಾರಂಟಿಗಳ ಅನುಷ್ಠಾನಕ್ಕಾಗಿ ತೀವ್ರವಾಗಿ ಹೆಣಗಾಡುತ್ತಿದ್ದು, ಅಭಿವೃದ್ಧಿ ಕಾರ್ಯಗಳು ಅನುದಾನದ ಕೊರತೆಯಿಂದಾಗಿ ನಿಂತು ಹೋಗಿವೆ.

ವಿಧಾನ ಸಭೆಯ ಕಲಾಪದಲ್ಲಿ ರಾತ್ರಿ 12 ರ ವರೆಗೆ ಚರ್ಚೆಗಳು ನಡೆದರೂ ಕೂಡ ಯಾವುದೇ ಪ್ರಯೋಜನವಾಗಲಿಲ್ಲ. ರಾಜಧಾನಿ ಬೆಂಗಳೂ–ರಿನ ರಸ್ತೆಗಳು ಹಾಳಾಗಿವೆ. ಅಲ್ಲಿಯೇ ಹೇಳುವವರು ಕೇಳುವವರು ಇಲ್ಲದಂತಾಗಿದೆ.

ಜಮಖಂಡಿ ಕ್ಷೇತ್ರದ 1,100 ಕಿ.ಮಿ. ಗ್ರಾಮೀಣ ರಸ್ತೆಗಳ ಪೈಕಿ 800 ಕಿ.ಮಿ. ರಸ್ತೆಗಳು ಸಂಪೂರ್ಣ ಹಾಳಾಗಿವೆ. ಇದರಿಂದ ಬಸ್ ಸೌಲಭ್ಯ ಇಲ್ಲದಂತಾಗಿ ಗರ್ಭಿಣಿಯರು, ರೋಗಿಗಳನ್ನು ಜೋಳಿಗೆಗಳಲ್ಲಿ ಹಾಕಿಕೊಂಡು ಆಸ್ಪತ್ರೆಗೆ ಸಾಗಿಸುವ ಪರಿಸ್ಥಿತಿ ಎದುರಾಗಿದೆ.


## ಮಲ್ಲಪ್ಪ ರುದ್ರಪ್ಪ ನಿಲೋಗಲ್ಲ ನಿಧನ

**ಕಂದಗಲ್ಲ :** ಗ್ರಾಮದ ಆದಿ ಬಣಜಿಗರ ಸಮಾಜದ ಹಿರಿಯರು ಹಿರಿಯ ಪತ್ರಕರ್ತ ಹಾಗೂ ಸಾಹಿತಿ ನಾಗೇಶ್ ನಿಲೋಗಲ್ಲ ರವರ ಹಿರಿಯ ಸಹೋದರ ಮಲ್ಲಪ್ಪ ರುದ್ರಪ್ಪ ನಿಲೋಗಲ್ಲ 83 ನಿಧನರಾದರು.

3 ಗಂಡು 1 ಹೆಣ್ಣು ಸಹೋದರ ಸಹೋದರಿಯರು ಹಾಗೂ ಅಪಾರ ಬಂಧು ಬಳಗ ಬಿಟ್ಟು ಅಗಲಿದ್ದಾರೆ.



## ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಅವರ ಮನೆಯಲ್ಲಿ ಪರಿಸರ ಸ್ನೇಹಿ ಗಣೇಶ ಪ್ರತಿಷ್ಠಾಪಿಸಿ ವಿಶೇಷ ಪೂಜೆ



**ಬೀದರ್ :** ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಅವರು ತಮ್ಮ ಮನೆಯಲ್ಲಿ ಕುಟುಂಬದೊಂದಿಗೆ ಮಣ್ಣಿನ ಗಣೇಶ ಮೂರ್ತಿ ಪ್ರತಿಷ್ಠಾಪನೆ ಮಾಡಿ ಪರಿಸರ ಸ್ನೇಹಿ ಗಣೇಶನ ಪೂಜೆಯ ಮೂಲಕ ಹಸಿರು ಪರಿಸರ ಉಳಿಸುವ ಸಂಕಲ್ಪವನ್ನು ಹಂಚಿಕೊಂಡರು.

ಮನೆಯಲ್ಲಿ ವಿಶೇಷ ಅಲಂಕಾರ, ತಳಿರು ತೋರಣಗಳ ಅಳವಡಿಕೆ ಮತ್ತು ಮಣ್ಣಿನ ಗಣಪತಿ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಿದರು.

ಬಳಿಕ ಮಾತನಾಡಿದ ಅವರು ಶ್ರೀ ಗಣಪತಿ ಬಪ್ಪನ ಆಶೀರ್ವಾದದಿಂದ ಜನಜೀವನದಲ್ಲಿ ಸುಖ–ಸಮೃದ್ಧಿ ನೆಲಸಿರಲಿ ಎಂದು ನಾಡಿನ ಸಮಸ್ತ ಜನತೆಗೆ ಗೌರಿ–ಗಣೇಶ ಶುಭಕೋರಿದರು.

ಶ್ರೀ ಗಣಪ ಹಾಗೂ ತಾಯಿ ಗೌರಿಯು ನಾಡಿಗೆ ಎದುರಾಗಿರುವ ಅತಿವೃಷ್ಟಿ ಸಂಕಷ್ಟ ದೂರವಾಗಿಸಿ ಕಾಲಕಾಲಕ್ಕೆ ಮಳೆ ಬೆಳೆ ಆಗುವ ಮೂಲಕ ಎಲ್ಲೆಡೆ ಸುಖ, ಶಾಂತಿ, ಸಮೃದ್ಧಿ ಹಾಗೂ ನೆಮ್ಮದಿ ಕರುಣಿಸಲೆಂದು ಪ್ರಾರ್ಥಿಸಿದರು.

# ಜ್ಯೋತಿಷಿ ಮೇಲೆ ಹಲ್ಲೆ ನಡೆಸಿ ಹಣ, ಚಿನ್ನಾಭರಣ ದರೋಡೆ

**ಕಲಬುರಗಿ :** ಆಟೋ ಚಾಲಕ ಮತ್ತು ಇತರ ನಾಲ್ವರು ಜ್ಯೋತಿಷಿಯೊಬ್ಬರ ಮೇಲೆ ಹಲ್ಲೆ ನಡೆಸಿ ಅವರ ಬಳಿ ಇದ್ದ ಹಣ ಮತ್ತು ಚಿನ್ನಾಭರಣ ದರೋಡೆ ಮಾಡಿರುವ ಘಟನೆ ನಗರದಲ್ಲಿ ನಡೆದಿದೆ.

ಹೈದ್ರಾಬಾದನ ರಾಮಾಂತರಪೂರಂ ನಿವಾಸಿ ಪರಶುರಾಮ ವಾಸ್ಟರ್ (ಶಾಸ್ತ್ರಿ) ಎಂಬುವವರು ಕಲಬುರಗಿಯ ಕರುಣೇಶ್ವರ ನಗರದಲ್ಲಿರುವ ತಮ್ಮ ಸಹೋದರರ ಮನೆಗೆ ಆಗಮಿಸಿ ಮರಳಿ ಹೈದ್ರಾಬಾದಗೆ ಹೋಗಲು ರಾತ್ರಿ 10.30ರ ಸುಮಾರಿಗೆ ಕರುಣೇಶ್ವರ ನಗರ ಹತ್ತಿರದ ಪೆಟ್ರೋಲ್ ಪಂಪ್ ಹತ್ತಿರ ಆಟೋಗಾಗಿ ಕಾಯುತ್ತ ನಿಂತಿದ್ದಾರೆ.

ಈ ವೇಳೆ ಅಲ್ಲಿಗೆ ಆಗಮಿಸಿದ ಆಟೋದಲ್ಲಿ ಕುಳಿತಿದ್ದಾರೆ.

ಇವರು ಆಟೋದಲ್ಲಿ ಕೂರುವ ಮುನ್ನವೇ ಚಾಲಕ ಸೇರಿ ಐದು ಜನ ಆಟೋದಲ್ಲಿ ಇದ್ದರು ಎಂದು ತಿಳಿದುಬಂದಿದೆ.

ಆಟೋ ಜೇವರ್ಗಿ ರಸ್ತೆಯ ಮೇಲ್ಸೇತುವೆ ಮೇಲೆ ಬರುತ್ತಿದ್ದಂತೆಯೇ ಆಟೋದಲ್ಲಿದ್ದ ಐದು ಜನರ ಪೈಕಿ ಒಬ್ಬ ಇವರ ಮೇಲೆ ಹಲ್ಲೆ ನಡೆಸಿ ಬೆನ್ನಿಗೆ ಚಾಕುವಿನಿಂದ ತಿವಿದು ಇವರ ಬಳಿ ಇದ್ದ 60 ಸಾವಿರ ರೂಪಾಯಿ ಮೌಲ್ಯದ 8 ಗ್ರಾಂ.ಬಂಗಾರದ ರಿಂಗ್, 40 ಸಾವಿರ ರೂ.ಮೌಲ್ಯದ 5 ಗ್ರಾಂ.ಬಂಗಾರದ ರಿಂಗ್




ಮತ್ತು 3 ಸಾವಿರ ರೂ.ನಗದು, ಎರಡು ಮೊಬೈಲ್ ಕಸಿದುಕೊಂಡಿದ್ದಾನೆ.

ನಂತರ ಆಟೋದಲ್ಲಿ ಇವರನ್ನು ಸೇಡಂ ರಸ್ತೆಯ ಬುದ್ಧ ಮಂದಿರದ ಹಿಂದುಗಡೆ ಇರುವ ರಸ್ತೆಯ ಇಳಿಸಿ ವಿವಸ್ತ್ರರನ್ನಾಗಿ ಮಾಡಿ ಮೊಬೈಲ್‌ಗಳನ್ನು ಎಸೆದು ಪರಾರಿಯಾಗಿದ್ದಾರೆ.

ಈ ಸಂಬಂಧ ಪರಶುರಾಮ ವಾಸ್ಟರ್ ಅವರು ಅಶೋಕನಗರ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದು, ತನಿಖೆ ನಡೆದಿದೆ.

ಇತ್ತೀಚೆಗೆ ರಾತ್ರಿ ವೇಳೆ ಆಟೋದಲ್ಲಿ ಸಂಚರಿಸುತ್ತಿದ್ದ ಬ್ಯಾಂಕ್ ಮ್ಯಾನೇಜರ್ ಒಬ್ಬರ ಮೇಲೆ ಹಲ್ಲೆ ನಡೆಸಿ ಹಣ ಮತ್ತು ಚಿನ್ನಾಭರಣ ದೋಚಿದ ಪ್ರಕರಣ ನಡೆದ ಕೆಲವೇ ದಿನಗಳ ಅಂತರದಲ್ಲಿ ಇಂತಹ ಮತ್ತೊಂದು ಪ್ರಕರಣ ನಡೆದಿರುವುದು ಬೆಳಕಿಗೆ ಬಂದಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

# ಶಿಸ್ತು ಪಾಲನೆಗಾಗಿ ಪೊಲೀಸರಿಂದ ಶಿಸ್ತಿನ ಪಥ ಸಂಚಲನ

**ಜಮಖಂಡಿ :** ಸಂಭ್ರಮದ ಗಣೇಶೋತ್ಸವ ಮತ್ತು ಈದ್–ಮಿಲಾದ್ ಹಬ್ಬದ ಆಚರಣೆ ನಿಮಿತ್ಯ ತಾಲೂಕಿನಲ್ಲಿ ಜನತೆ ಹಬ್ಬಗಳನ್ನು ಶಾಂತ ರೀತಿಯಲ್ಲಿ ಆಚರಿಸಬೇಕೆಂದು ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಜಾಗೃತಿ ಮೂಡಿಸುವ ದಿಶೆಯಲ್ಲಿ ಪೋಲೀಸರು ಆಕರ್ಷಕ ಪಥ ಸಂಚಲನ ಮೂಲಕ ಗಮನ ಸೆಳೆದರು.

ನಗರದ ಎ.ಜಿ.ದೇಸಾಯಿ ವೃತ್ತದಲ್ಲಿ ಡಿ.ವೈ.ಎಸ್.ಪಿ. ರೋಷನ್ ಅವರು ಪಥ ಸಂಚಲನಕ್ಕೆ ಚಾಲನೆ ನೀಡಿದರು. ಸಿ.ಪಿ.ಐ. ಮಲ್ಲಪ್ಪ ಮಡ್ಡಿ, ಪಿ.ಎಸ್.ಐ. ಗಳಾದ ಅನೀಲ ಕುಂಬಾರ ಎ. ಎಸ್. ಪೂಜಾರ ಸಹಿತ ಆರಕ್ಷಕರು, ಸಿಬ್ಬಂದಿಯವರು



ಪಾಲ್ಗೊಂಡಿದ್ದರು.

ಪೋಲೀಸರ ಪಥ ಸಂಚಲನ ಎ.ಜಿ.ದೇಸಾಯಿ ವೃತ್ತದಿಂದ ಡಾ. ರಾಜಕುಮಾರ ರಸ್ತೆ ಮಾರ್ಗವಾಗಿ ಅಶೋಕ ವೃತ್ತ,

ಅರ್ಬನ ಬ್ಯಾಂಕ ರಸ್ತೆ, ಹಳೇ ತಹಶೀಲ್ದಾರ ಕಚೇರಿ, ಗವಳಿ ಗಲ್ಲಿ, ರಾಮದೇವ ಗಲ್ಲಿ, ಮಲ್ಲಿಕಾರ್ಜುನ ಗಲ್ಲಿ, ಮುಧೋಳ ರಸ್ತೆ, ಹನುಮಾನ ಚೌಕ, ಥೇಟರ ರಸ್ತೆ ಮೂಲಕ ಪೊಲೀಸ್ ಠಾಣೆಗೆ ತೆರಳಿತು.

## ತಾಮ್ರ, ಬೆಳ್ಳಿ ಆಭರಣ ತೊಳೆದುಕೊಡುವುದಾಗಿ ಹೇಳಿ 7 ತೊಲೆ ಚಿನ್ನಾಭರಣ ದೋಚಿದ ಖದೀಮರು

**ಕಲಬುರಗಿ :** ತಾಮ್ರ ಮತ್ತು ಬೆಳ್ಳಿ ಆಭರಣ ತೊಳೆದುಕೊಡುವುದಾಗಿ ಹೇಳಿ ಮಹಿಳೆಯೊಬ್ಬರಿಗೆ ನಂಬಿಸಿ ಅವರಬಳಿಇದ್ದ7ಲಕ್ಷರೂ.ಮೌಲ್ಯದ7 ತೊಲೆ ಚಿನ್ನಾಭರಣ ದೋಚಿಕೊಂಡು ಹೋಗಿರುವ ಘಟನೆ ಸಂಗಮೇಶ್ವರ ಕಾಲೋನಿಯಲ್ಲಿ ನಡೆದಿದೆ.




ಬೈಕ್ ಮೇಲೆ ಬಂದ ಇಬ್ಬರು ಅಪರಿಚಿತರು ತಾಮ್ರ, ಬೆಳ್ಳಿ ಆಭರಣ ತೊಳೆದುಕೊಡುವುದಾಗಿ ಹೇಳಿ ಮನೆ ಮುಂದೆ ಬಂದಾಗ ಸುರೇಖಾ ವರದೇಂದ್ರ ಕೊಪ್ಪಳ ಅವರು ಅವರನ್ನು ಮನೆಯೊಳಗೆ ಕರೆದಿದ್ದಾರೆ. ಅಪರಿಚಿತರು ಇವರ ಬಳಿ ಇದ್ದ ಬೆಳ್ಳಿ ಸಾಮಾನನ್ನು ತೊಳೆದು ಕೊಟ್ಟಿದ್ದಾರೆ.

ಆ ನಂತರ ಇವರ ಕೈಯಲ್ಲಿದ್ದ ಬಂಗಾರದ ಬಳೆ ಮತ್ತು ಬಿಲವಾರ ನೋಡಿ ಅವುಗಳನ್ನು ಸಹ ತೊಳೆದುಕೊಡುವುದಾಗಿ ಹೇಳಿ ನಂಬಿಸಿ ಅವುಗಳನ್ನು ಡಬ್ಬಿಯಲ್ಲಿ ಹಾಕಿ ಹೀಟ್ ಮಾಡಿ ಇವರ ಗಮನ ಬೇರೆಡೆ ಸೆಳೆದು ಇವರ ಕೈಯಲ್ಲಿ ಖಾಲಿ ಡಬ್ಬಿ ಕೊಟ್ಟು ಅಲ್ಲಿಂದ ಪರಾರಿಯಾಗಿದ್ದಾರೆ.

ಈ ಸಂಬಂಧ ಸುರೇಖಾ ಅವರ ಪತಿ ವರದೇಂದ್ರ ಅವರು ವಿಶ್ವವಿದ್ಯಾಲಯ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದು, ತನಿಖೆ ನಡೆದಿದೆ.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State